# ಅಧ್ಯಾಯ ಐದು

# ಮೈಸೂರು ಜಿಲ್ಲೆಯ ವೀರಶೈವ ಮಠಗಳ ಶೈಕ್ಷಣಿಕ ಕೊಡುಗೆ

# ಅಧ್ಯಾಯ : ೫

## ಮೈಸೂರು ಜಿಲ್ಲೆಯ ವೀರಶೈವ ಮಠಗಳ ಶೈಕ್ಷಣಿಕ ಕೊಡುಗೆ

ಮೈಸೂರು ಜಿಲ್ಲೆಯ ವೀರಶೈವ ಮಠಗಳು ಸಮಾಜಕ್ಕೆ ಶೈಕ್ಷಣಿಕವಾಗಿ ನೀಡಿರುವ ಕೊಡುಗೆಗಳನ್ನು ತಿಳಿಯುವ ಮುನ್ನ ಮಠಗಳಿಗೂ ಶಿಕ್ಷಣಕ್ಕೂ ಇರುವ ಸಂಬಂಧವೇನು, ಇದರ ಹಿನ್ನಲೆ ಅರಿಯುವುದು ಮುಖ್ಯ. ಆದಕಾರಣ ಇತಿಹಾಸವನ್ನು ತಿರುಚದೆ, ನೋಡದೆ ವರ್ತಮಾನವನ್ನು ಪರಾಮರ್ಶಿಸಲು ಸಾಧ್ಯವಿಲ್ಲ. 'ಅಮರಸಿಂಹ'ನು ಒಂದೆಡೆ "ಮಠಶ್ಚಾತ್ರಾದ್ರಿ ನಿಲಯ" ಎಂದಿದ್ದಾನೆ.ಅಂದರೆ ಮಠಗಳೆಂದರೆ ವಿದ್ಯಾಮಂದಿರಗಳೆಂದು ಅರ್ಥ. ಲೌಕಿಕವನ್ನು ಬಿಟ್ಟು ಅಲೌಕಿಕ ಮೋಕ್ಷಕ್ಕೆ ಕಾರಣವಾದ ಶ್ರೇಯೋ ಮಾರ್ಗವನ್ನು ಹಿಡಿದುದರಿಂದ ಯಮನು ನಚೀಕೇತನನ್ನು 'ವಿದ್ಯಾರ್ಥಿ' ಎಂದು ಕರೆಯುತ್ತಾನೆ. 'ತಮಸೋಮ ಜೋತಿರ್ಗಮಯ' ಎಂಬಂತೆ ಅಜ್ಞಾನದಿಂದ ಜ್ಞಾನದ ಕಡೆಗೆ ಕರೆದುಕೊಂಡು ಹೋಗುವುದೇ ಈ ಮಠಗಳ ಕಾಯಕ ಅಥವಾ ಕರ್ತವ್ಯ. ಮಠಗಳು ಮೂಲತಃ ಗುರು-ಶಿಷ್ಯರು ಮತ್ತು ಸಾಧು ಸನ್ಯಾಸಿಗಳು ವಾಸಿಸುವ ಸ್ಥಳವಾಗಿದ್ದವು. ಇವುಗಳ ಮೂಲಧ್ಯೇಯ ಧರ್ಮ-ಜ್ಞಾನಬೋಧನೆ ಮತ್ತು ಪ್ರಸಾರವೇ ಇವುಗಳ ಮುಖ್ಯ ಕೆಲಸವಾಗಿತ್ತು. ಬೋಧನೆ ನಡೆಯುವ ನಿರ್ಧಿಷ್ಟ ಸ್ಥಳಗಳನ್ನು ನಾವು ಪಾಠಶಾಲೆ ಅಥವಾ ಶಿಕ್ಷಣ ಕೇಂದ್ರ ಎಂದು ಕರೆಯುವುದುಂಟು. ಕನ್ನಡ ನಿಘಂಟುವಿನಲ್ಲೂ ಕೂಡ ಮಠವೆಂದರೆ ಶಿಕ್ಷಣಕೇಂದ್ರ ಎಂದೇ ಉಲ್ಲೇಖಗೊಂಡಿರುವುದನ್ನು ಗಮನಿಸಿದರೆ, ಮಠಗಳ ಮೂಲಕ ವಿದ್ಯಾಧಾನ ನಡೆಯುತ್ತಿರುವುದನ್ನು ಮನಗಾಣಬಹುದು. ಪ್ರಾಚೀನಭಾರತದಲ್ಲಿ ವಿದ್ಯಾದಾನ ಪವಿತ್ರದಾನ ಎನ್ನುತ್ತಿದ್ದರು. ಆದರೂ ಗಮನಿಸಬೇಕಾದ ಅಂಶವೇನೆಂದರೆ ಪ್ರಾಚೀನ ಭಾರತದ ಶಿಕ್ಷಣ ಪದ್ಧತಿಯಲ್ಲಿ ಆಧ್ಯಾತ್ಮಿಕತೆಯ ಕಡೆಗೆ ಹೆಚ್ಚು ಒಲವಿರುವುದನ್ನು ಗಮನಿಸಬಹುದು.

'ಚಿನ್ನಕ್ಕಿಂತ ಅನ್ನಲೇಸು ಅನ್ನಕ್ಕಿಂತ ಅಕ್ಷರಲೇಸು' ಎಂಬ ಹಿರಿಯರ ಮಾತಿನಲ್ಲಿ ವಿದ್ಯೆಯ ಮಹತ್ವವನ್ನು ಕುರಿತು ಹೇಳಲಾಗಿದೆ. ಏಕೆಂದರೆ ಯಾರೂ ಅಪಹರಿಸಲಾರದ, ಶ್ರೇಷ್ಟವಾದ ಮನುಷ್ಯನನ್ನು ಮನುಷ್ಯತ್ವದ ಮಾರ್ಗವನ್ನು ತಿಳಿಸುವ ಈ ವಿದ್ಯೆಯು ಮನುಷ್ಯನು ಜೀವಂತವಿರುವರೆಗೂ ಜೊತೆಗೆ ಬರುವ ಜೊತೆಗಿರುವ ಯಾರು ಕದಿಯದ ಸಂಪತ್ತು ಎಂದರೆ ಅದು ವಿದ್ಯೆ. ವಿದ್ಯೆಯೆಂಬುದು ಕಲ್ಪವೃಕ್ಷವಿದ್ದಂತೆ ಒಂದೆಡೆ ಭಾರತೀಯ ಕಾವ್ಯಮಿಮಾಂಸೆಕಾರನಾದ ಮುಮ್ಮಟನು ತನ್ನ 'ಕಾವ್ಯಪ್ರಕಾಶ'ದಲ್ಲಿ ಕಾವ್ಯದ ಪ್ರಯೋಜನವನ್ನು ಕುರಿತು ಹೇಳುವಾಗ "ಕಾವ್ಯಂಯಶಸ್ಸೇರ್ಥಕೃತೇ ವ್ಯವಹಾರಮಿದೇ ಶಿವೇತರಕ್ಷತಯೇ ಸದ: ಪರನಿರ್ವೃತಯೇ ಕಾಂತಾಸಂಮಿತತಯೋಪದೇಶಯುಜೇ" ಎಂದಿದ್ದಾರೆ. ಅಂದರೆ ಕಾವ್ಯದಿಂದ ಯಶಸ್ಸುಗಳಿಸಬಹುದು

ವಿದ್ಯೆಯಿಂದ ಕೀರ್ತಿಹಣ ಸಂಪಾದಿಸಬಹುದು, ಅಷ್ಟೆಅಲ್ಲದೆ ಈ ಕಾವ್ಯ ಪ್ರಭುವಿನಂತೆ ಒಳ್ಳೆಮಾರ್ಗದಲ್ಲಿ ನಡೆಯಲು ಆಜ್ಞಾಪಿಸುತ್ತದೆ ಮಿತ್ರನಂತೆ ಸಲಹೆ ನೀಡುತ್ತದೆ ಹೆಂಡತಿ(ಪ್ರಿಯ)ಯಂತೆ ಉಪದೇಶವನ್ನು ನೀಡುತ್ತದೆ ಎಂದಿದ್ದಾರೆ.

ಪ್ರಾಚೀನ ಕರ್ನಾಟಕದಲ್ಲಿ ಬ್ರಾಹ್ಮಣ, ಬೌದ್ಧ ಹಾಗೂ ಜೈನಧರ್ಮಗಳು ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ತಮ್ಮದೆ ಆದಂತಹ ಕೊಡುಗೆ ನೀಡಿವೆ. ಈ ಮೂರು ಧರ್ಮಗಳು ವಿದ್ಯಾಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನೂ ,ಸಂಕ್ಷೇಪ್ತವಾಗಿ ಗಮನಿಸಿ ಮುಂದುವರಿಯಲು ಪ್ರಯತ್ನಿಸಲಾಗಿದೆ. ಮೂಲದಲ್ಲಿ ಬ್ರಾಹ್ಮಣ ಶಿಕ್ಷಣಸಂಸ್ಥೆಗಳು ಶೈಕ್ಷಣಿಕವಾಗಿ ನಾಲ್ಕುರೀತಿ ಪಂಗಡಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವು, ಅಗ್ರಹಾರ, ಬ್ರಹ್ಮಪುರಿ, ಘಟಿಕಸ್ಥಾನ ಮತ್ತು ದೇವಸ್ಥಾನ. ಇದಕ್ಕೆ ಆಧಾರವಾಗಿ ಕ್ರಿ.ಶ.೧೨೬೩ರಮೈಸೂರುಜಿಲ್ಲೆಯ ಸೋಮನಾಥಪುರದ ಶಾಸನವೊಂದರಲ್ಲಿ 'ಮಹಾಗ್ರಹರವಿದ್ಯಾನಿಧಿ ಪ್ರಸನ್ನ ಸೋಮನಾಥಪುರಂ' ಎಂದು ವರ್ಣಿಸುತ್ತದೆ. ಇನ್ನೂ ವಿದ್ಯಾಪಾರಂಗತರಾದ ಬ್ರಾಹ್ಮಣಂ ನಿವಾಸವೇ ಬ್ರಹ್ಮಪುರಿ. ಇಲ್ಲಿ ಅಧ್ಯಾಪಕರು ವಿದ್ಯಾರ್ಥಿಗಳು ವಾಸವಾಗಿದ್ದರೆಂದು ಅನೇಕ ಶಾಸನಗಳಲ್ಲಿ ಬರೆಯಲಾಗಿದೆ. ಉಳಿದಂತೆ ಘಟಿಕಸ್ಥಾನಗಳಿಗೆ ಪೂರ್ವದಲ್ಲಿ ರಾಜಾದಿರಾಜರೇ ವಿದ್ಯಾರ್ಜನೆಗಾಗಿ ಹೋಗಿದ್ದರೆಂಬ ನಿದರ್ಶನಗಳಿವೆ. ದೇವಸ್ಥಾನಗಳು ಶುದ್ಧ ಚಾರಿತ್ರ್ಯವುಳ್ಳ ತಪೋನಿಷ್ಟ ಋಷಿಗಳ ಅಧ್ಯಯನ ಕೇಂದ್ರಗಳಾಗಿ ಪ್ರಾಥಮಿಕ ವಿದ್ಯಾ ಕೇಂದ್ರಗಳಾಗಿದ್ದವಂತೆ.

"ಬೌದ್ಧ ವಿದ್ಯಾಭ್ಯಾಸ ಕ್ರಮವು ಕ್ರಿ.ಪೂ. ೩ನೇ ಶತಮಾನದಿಂದಲೆ ಕರ್ನಾಟಕದಲ್ಲಿ ಕಾಣಿಸಿಕೊಂಡಿದೆ. ಈ ಧರ್ಮದ ಪ್ರಭಾವ ಅಶೋಕನ ಆಳ್ವಿಕೆಯಲ್ಲಿ ನಿಖರ ಮಾಹಿತಿ ಕಾಣಿಸಿಕೊಂಡಿದೆ . ಇವನ ಆಳ್ವಿಕೆಯ ೧೮ನೇ ವರ್ಷದಲ್ಲಿ ಥೆರಾತಕ್ಷಿತನೆಂಬ ಬಿಕ್ಷುವು ಬನವಾಸಿಗೆ ಬಂದು ಬೌದ್ಧ ಧಾರ್ಮಿಕ ಮತ್ತು ವಿದ್ಯಾಕೇಂದ್ರಗಳನ್ನು ಸ್ಥಾಪಿಸಿದನೆನ್ನಲಾಗಿದೆ' ಇದಲ್ಲದೆ ೭ನೇಶತಮಾನದಲ್ಲಿ ಬನವಾಸಿಗೆ ಭೇಟಿಕೊಟ್ಟು ಹುಯನ್‌ತ್ಸಾಂಗ್‌ನು ಬನವಾಸಿ ಹಾಗೂ ಅದರ ಸುತ್ತ ಬನವಾಸಿ ಅನೇಕ ಬೌದ್ಧ ವಿಹಾರಗಳನ್ನು ಕಂಡಿದ್ದನೆಂದು ಹೇಳಲಾಗಿದೆ. ಅಲ್ಲದೆ ಬೋಧನೆಯ ಭಾಷೆಯು ಪ್ರಾಥಮಿಕ ಶಿಕ್ಷಣವು ಕನ್ನಡದಲ್ಲೂ ಉನ್ನತಶಿಕ್ಷಣವು ಸಂಸ್ಕೃತದಲ್ಲೂ ನಡೆಯುತ್ತಿದ್ದಿತೆಂದು ಪ್ರೋ.ದಿಕ್ಷಿತ್ ನಿರ್ಣಯಿಸುತ್ತಾರೆ"[೧].

"ಕರ್ನಾಟಕದಲ್ಲಿ ಬ್ರಾಹ್ಮಣ ವಿದ್ಯಾಕೇಂದ್ರಗಳಂತೆ, ಬೌದ್ಧರಂತೆ, ಜೈನರು ಸಹ ಕ್ರಿ.ಪೂ.೨೯೭ರಿಂದಲೆ ಶಿಕ್ಷಣಪದ್ಧತಿ ಪ್ರಾರಂಭಿಸಿದರು ಚಂದ್ರಗುಪ್ತಮೌರ್ಯ ಹಾಗೂ ಭದ್ರಬಾಹು

---

೧. Prof. G. S. Dixith : Education of Science Karnataka Through the Age P- 156

ಶ್ರವಣಬೆಳಗೊಳಕ್ಕೆ ಬಂದಿದ್ದ ನಿದರ್ಶನಗಳಿವೆ. ಕರ್ನಾಟಕದಲ್ಲಿ ಜೈನರಬಸದಿ, ಚೈತ್ಯಾಲಯ ಮತ್ತು ದೇವಾಲಯಗಳು ವಿದ್ಯಾಕೇಂದ್ರಗಳಾಗುವುದರ ' ಜೊತೆಗೆ ತಮ್ಮ ಮನೆಗಳಲ್ಲಿಯೂ ಅಧ್ಯಾಪನ ಕಾರ್ಯ ಕೈಗೊಂಡು ತಮ್ಮದೆ ಆದ ಪದ್ಧತಿಯನ್ನ ಅನುಸರಿಸುತ್ತದ್ದರು. ಉದಯದೇವ ಪಂಡಿತನು ಪೂಜ್ಯಪಾದನ ಗೃಹ ಭ್ರಾತೃನಾಗಿದ್ದನು"[೨] ಜೈನ ವಿದ್ಯಾಭ್ಯಾಸ ಕ್ರಮವು ಗಣಿತ, ವೈದ್ಯ, ಶಿಲ್ಪ, ಜೀವಶಾಸ್ತ್ರ ಇತ್ಯಾದಿ ವಿಷಯಗಳ ಬಗ್ಗೆ ಬಹಳಷ್ಟು ಕಾರ್ಯನಿರ್ವಹಿಸಿದ್ದಾರೆ. ಚಾವುಂಡರಾಯನ "ಲೋಕೋಪಾಕಾರ'ಗ್ರಂಥವು ಒಂದು ಜ್ಞಾನಕೋಶದ ಮಾದರಿಯಾಗಿದೆ. ಇದರಲ್ಲಿ ಔಷಧೋಪಾಚಾರ, ವಾಸ್ತುಶಿಲ್ಪ, ಜೀವಶಾಸ್ತ್ರ ಮುಂತಾದವುಗಳನ್ನೂ ಕುರಿತು ಹೇಳಲಾಗಿದ್ದು, ಎಷ್ಟೋ ಅಂಶಗಳು ಇಂದಿಗೂ ಉಪಯುಕ್ತವಾಗಿದೆ. 'ಮನಸೋಲ್ಲಾಸ'ವು ಜೈನರು ಮತ್ತೊಂದು ಅಮೂಲ್ಯ ಕೊಡುಗೆ ಆರನೇ ವಿಕ್ರಮಾದಿತ್ಯನ ಮಗ ಇಮ್ಮಡಿಸೋಮೇಶ್ವರನು ಇದರ ಕರ್ತೃ. ಇದರಲ್ಲಿ ಪಶುವೈದ್ಯ, ವಾಸ್ತುಶಿಲ್ಪ ವರ್ಣಶಿಲ್ಪ ಕೌಶಲ, ಪೀಠೋಪಕರಣ ಮತ್ತು ವಾಹನಗಳ ವಿಷಯವಾಗಿ ಹೇಳಲಾಗಿದೆ."[೩]

"ಅಂದು ಒಬ್ಬ ಆಧ್ಯಾತ್ಮ ಜೀವಿಯು ತನ್ನೊಡನೆ ಇತರರ ಆತ್ಮಕಲ್ಯಾಣವನ್ನು ಬಯಸುತ್ತಾ ತನ್ನ ಮನೆಯನ್ನು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳಿಗೆ ತೆರೆದಿಟ್ಟರೆ (ಮೀಸಲಿಟ್ಟರೆ) ಅದು ಮಠವೆಂಬ ಅಭಿದಾನ ಪಡೆಯುತ್ತಿತ್ತು. ಹೀಗೆ ವಿದ್ಯಾಭ್ಯಾಸದ ಕ್ರಮ ಬೆಳೆದು ಬರದಂತೆ ೧೨ನೇ ಶತಮಾನದ ನಂತರ ವೀರಶೈವ ಆಂದೋಲನದೊಂದಿಗೆ ವಿದ್ಯಾಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಕಂಡು ಬಂದವು. ಈ ಕಾಲಘಟ್ಟದ ಮಹಾನ್‌ಶರಣ ಬಸವಣ್ಣನು ಮಾನವನಸರ್ವಾಂಗೀಣ ವ್ಯಕ್ತಿತ್ವ ರೂಪುಗೊಳ್ಳುವುದೇ ವಿದ್ಯಾಭ್ಯಾಸದ ಮೂಲಕ ಎಂಬುದನ್ನು ಮನಗಂಡರು."[೪] ಮನೆಯೇ ಮೊದಲ ಪಾಠಶಾಲೆಯಾದರೆ ನಂತರದ ಸ್ಥಾನ ಶಾಲೆ ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಬಸವಣ್ಣ ತನ್ನ ಅನುಯಾಯಿಗಳಿಗೆ ವೈಯಕ್ತಿಕವಾಗಿ ಚಿತ್ತಶುದ್ಧಗೊಳಿಸುವುದರ ಜೊತೆಗೆ ಸಮಾಜೋಧಾರ್ಮಿಕ ಬೆಳವಣಿಗೆ ಅವಕಾಶ ಕಲ್ಪಿಸಿಕೊಟ್ಟು ಇಂದಿನ ಆಧುನಿಕ ಶಿಕ್ಷಣ ವ್ಯವಸ್ಥೆ ಹೇಗಿದೆಯೋ, ಅವೆಲ್ಲ ೧೨ನೇ ಶತಮಾನದಲ್ಲಿ ಬಸವಣ್ಣನು ಅಳವಡಿಸಿದ್ದೆ ಆಗಿದೆ. ಜಾತಿ ಮತ–ಲಿಂಗ–ಧರ್ಮ ವೃತ್ತಿ ಭೇದವಿಲ್ಲದೆ ಸಮಾನತೆ ಸಹಬಾಳ್ವೆಗೆ ಹೊಸಮಾರ್ಗ ತೋರಿದುದು ಮಹತ್ತರವಾದ ಕೊಡುಗೆ. ಬಸವಣ್ಣನು ತನ್ನ ರೂಪಿತಕಾರ್ಯ ಯಶಸ್ವಿಯಾಗಲೆಂದು ತನ್ನ ಅನುಯಾಯಿಗಳ ಮೂಲಕ ಹಳ್ಳಿ ಹಳ್ಳಿಗಳಲ್ಲೂ ಮಠಗಳನ್ನು ಸ್ಥಾಪಿಸಿದನು. ಆ ಮೂಲಕ ವಿದ್ಯಾಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದ ಕೀರ್ತಿ ಇವರಿಗೆ ಸಲ್ಲುತ್ತದೆ.

_____________

೨. Prof.G.S.Dixith : Karnataka Through the Age. Page – 356-357

೩. Prof.G.S.Dixith : Karnataka Through the Age. Page – 358-359

೪. ಡಾ.ಸಂಗಮೇಶ ಸವದತ್ತಿ ಮಠ ವಿಶ್ವಪ್ರಭೆ ಸಂಪುಟ–೩ ಪುಟ – ೫೧೩

**ಶೈಕ್ಷಣಿಕವಾಗಿ ಮಠಗಳ ಸ್ವರೂಪ :–**

ಶಿಕ್ಷಣದ ಪ್ರಚಾರ ಕಾರ್ಯಕ್ಕಾಗಿ ಮೂರು ಪ್ರಕಾರದ ಮಠಗಳನ್ನು ಸಂಘಟಿಸಲಾಯಿತು. ಸಾಲಿಮಠ, ಓದಿಸುವ ಮಠ ಹಾಗೂ ವಿರಕ್ತ ಮಠ. ವೀರಶೈವ ಶರಣರ ಆದಿಪತ್ಯದಲ್ಲಿ ಈ ಮಠಗಳು ಧರ್ಮ, ಶಿಕ್ಷಣ, ಸಾಹಿತ್ಯ ಮತ್ತು ಸಂಸ್ಕೃತಿಯ ಕೇಂದ್ರಗಳಾಗಿ ಹಲವಾರು ಶತಮಾನಗಳವರೆಗೆ ನಾಡಿಗೆ ಸೇವೆ ಸಲ್ಲಿಸಿದ್ದವು. ೧೨ನೇ ಶತಮಾನದಲ್ಲಿ ಇದ್ದಂಥ ಶಿಕ್ಷಣ ಪದ್ಧತಿಯ ಮೂಲಕ ಪ್ರಭಾವಿತರಾದ ಶಿವಶರಣರು ತಮ್ಮದೆ ಆದ ಮಠಗಳನ್ನು ಸ್ಥಾಪಿಸಿದರು. ಗುರುವೊಬ್ಬನ ಹಿರಿತನದಲ್ಲಿ ಮಠಗಳು ಹೀಗೆ ಸಂಘಟಿತವಾದುದು ಈ ಶತಮಾನದ ಪ್ರಾರಂಭದಲ್ಲಿ ಇವೆಲ್ಲ ದೇವಾಲಯಕ್ಕೆ ಹೊಂದಿಕೊಂಡಿದ್ದವು. ನಂತರ ದೇವಾಲಯ ಮಠಗಳಾದವು ಅಥವಾ ಮಠಗಳಿಗೆ ದೇವಾಲಯಗಳನ್ನು ಜೋಡಿಸಲಾಯಿತು.

**ಸಾಲಿಮಠ** :–"ಈ ಮಠಗಳು ಆಧುನಿಕ ಮೂಲಶಿಕ್ಷಣ (Basics School)ಗಳನ್ನೂ ಹೋಲುತ್ತಿದ್ದವು. ಗಾಂಧೀಜಿಯವರ ವಾರ್ದ ಶಿಕ್ಷಣ ಪದ್ದತಿಯ ಪ್ರತಿರೂಪವನ್ನು ಇಲ್ಲಿ ಗುರುತಿಸಬಹುದು"[೫] "ಓದು, ಬರಹ, ಗಣಿತ ಮತ್ತು ಲೆಕ್ಕಚಾರಗಳಲ್ಲದೆ ಕಡ್ಡಾಯವಾಗಿ ಯಾವುದಾದರೊಂದು ಕೈಗಾರಿಕೆಯನ್ನೂ ಕಲಿಸಲಾಗುತ್ತಿತ್ತು ನೂಲುವುದು, ನೇಯುವುದು ಕೃಷಿ ವ್ಯವಸಾಯಗಳು ಮುಖ್ಯ ಕಾಯಕಗಳಾಗಿದ್ದವು ಅಲ್ಲದೆ ಪ್ರಥಮ ಚಿಕಿತ್ಸೆ ಮಾಧರಿಯ ವೈದಯಕೀಯ ಜ್ಞಾನವನ್ನು ಹೇಳಿಕೊಡಲಾಗುತ್ತಿತ್ತು."[೬]

**ಓದಿಸು ಮಠ** :– ಇಲ್ಲಿ ಯಾವುದೇ ಕರಕುಶಲ ಕೈಗಾರಿಕಾ ತರಭೇತಿ ನೀಡುತ್ತಿರಲಿಲ್ಲ ,ಬರೀ ಓದುವುದು ಬರೆಯುವುದನ್ನು ಕಲಿಸಲಾಗುತ್ತಿತ್ತು. ಸಾಲಿಮಠಗಳಲ್ಲಿ ಅಧ್ಯಯನ ಮುಗಿಸಿದ ಎಷ್ಟೋ ವಿದ್ಯಾರ್ಥಿಗಳು ಈಮಠಗಳಿಗೆ ಸೇರುತ್ತಿದ್ದರು. ಇಲ್ಲಿ ಸಾಹಿತ್ಯ ಹಾಗೂ ಇತರೆ ವಿಷಯಗಳನ್ನೂ ಕಲಿಯುತ್ತಿದ್ದರು. ಜೊತೆಗೆ ಸಂಸ್ಕೃತ ಅಧ್ಯಯನವು ಸಹ ಇಲ್ಲಿ ನಡೆಯುತ್ತಿತ್ತು. ಈ ಮಠಗಳು ಕ್ರಿ.ಶ ೧೨ನೇ ಶತಮಾನದ ಕೊನೆಗೆ ವೀರಶೈವ ಸಂಸ್ಕೃತ ಪಾಠಶಾಲೆಗಳಾಗಿ ಪರಿವರ್ತಿತವಾದವು. ಈ ಓದಿಸುವ ಮಠಗಳಿಗೆ 'ಉದಶಿಮಠ' ಎನ್ನುತ್ತಾರೆ ಹಳ್ಳಿಗಳಲ್ಲಿ ಹಿರೇಮಠಗಳು ಓದಿಸುಮಠಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವು.

---

೫. G.S.Gaddigimath, Kavya System & EducationStudies in Education & Culture.Page 256
೬. Prof.G.S.Dixith : Karnataka Through the Age. Page – 356

**ವಿರಕ್ತ ಮಠ:–** ಈ ಮಠಗಳು ಉನ್ನತಶಿಕ್ಷಣ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದವು. “ಧರ್ಮಸಮ್ಮೇಳನಗಳು ವಿವಿಧ ವಿಷಯಗಳ ಮೇಲೆ ವಿಚಾರ ಗೋಷ್ಠಿಗಳು ಮತ್ತು ಉಪನ್ಯಾಸ ಶಿಬಿರಗಳು ವಿರಕ್ತ ಮಠಗಳ ಆಶ್ರಯದಲ್ಲಿ ನಡೆಯುತ್ತಿದ್ದಿವು. ಸಾಲಿಮಠ , ಓದಿಸುಮಠಗಳಲ್ಲಿ ಅಧ್ಯಯನ ಮುಗಿಸಿದ ವಿದ್ಯಾರ್ಥಿಗಳು ಉಚ್ಚಶಿಕ್ಷಣಕ್ಕಾಗಿ ವಿರಕ್ತಮಠಗಳಿಗೆ ಹೊಗುತ್ತಿದ್ದರು. ಇವುಗಳು ಇಂದಿನ ಸ್ನಾತಕೋತ್ತರ ವಿದ್ಯಾಕೇಂದ್ರಗಳನ್ನು ಹೊಲುತ್ತಿದ್ದವು. ಇಲ್ಲಿ ಸಮಾಜಕ್ಕೆ ಉಪಯುಕ್ತವಾದ ನೂರೊಂದು ಕಾಯಕ ಇಲ್ಲಿ ವೃತ್ತಿಗಳನ್ನು ಕಲಿಸಲಾಗುತ್ತಿತ್ತು ಎಂಬುದನ್ನು ಗಮನಿಸಬಹುದು.”[೭] ಈ ಸಂದರ್ಭದಲ್ಲಿ ಚನ್ನಬಸವಣ್ಣನ ವಚನ ೩೫೯ರಲ್ಲಿ(ಹಿಂದೆ ಪ್ರಸ್ತಾಪಿಸಿದೆ) ಹೇಳಿರುವ ಪ್ರಕಾರ ಬಗೆಬಗೆಯ ಮಠಗಳಿದ್ದವು ಎಂಬುದನ್ನು ಗಮನಿಸಬಹುದು.

“ಮಠಗಳಲ್ಲಿಯ ಬೋಧನಾಕ್ರಮ ಪಠ್ಯ ಸಂಘಟನೆ ಮತ್ತು ಆಡಳಿತ ಹೇಗಿರಬೇಕು ಎಂಬುದನ್ನು ಶರಣಬಸವಣ್ಣನವರು ೮೦೦ ವರ್ಷಗಳಿಂದಿಯೇ ರೂಪಿಸಿದ್ದಾರೆ. ಜನಸಾಮಾನ್ಯರನ್ನು ಸಂಸ್ಕೃತ ಪಂಡಿತರಾನ್ನಾಗಿಸುವ ಉದ್ದೇಶವಿರಲಿಲ್ಲ. ಪ್ರಾದೇಶಿಕ ಭಾಷಾಶಿಕ್ಷಣದ ಮೂಲಕ ನಿತ್ಯ ಜೀವನವನ್ನು ಸಮರ್ಥವಾಗಿ ನಿರ್ವಹಿಸಲು ಅವರನ್ನು ಶಕ್ತರನ್ನಾಗಿ ಮಾಡುವುದೇ ಶಿಕ್ಷಣದಗುರಿ ಮತ್ತು ಧ್ಯೇಯೋದ್ದೇಶವಾಗಿತ್ತು. ಓದು ಬರಹ , ವ್ಯವಹಾರಿಕ ಗಣಿತ ಲೆಕ್ಕಚಾರ ಪ್ರಾದೇಶಿಕ ಭಾಷೆಗಳ ಒಳ್ಳೆಯ ಜ್ಞಾನ ಕೆಲವು ಸಂಸ್ಕೃತ ಶ್ಲೋಕಗಳ ಉಚ್ಛಾರಣೆ ಮತ್ತು ಮಹಾಕಾವ್ಯಗಳ ಮೂಲಕ ನೈತಿಕ ಶಿಕ್ಷಣ ಇವು ಕ್ರಿ.ಶ ೧೨೦೦ರಲ್ಲಿ ಪ್ರಾದೇಶಿಕ ಭಾಷಾ ಶಿಕ್ಷಣದಲ್ಲಿ ಪಠ್ಯಕ್ರಮದಲ್ಲಿ ಒಳಗೊಂಡಿದ್ದವು.”[೮] ಈ ವೀರಶೈವ ಮಠಗಳು ವಿಜಯನಗರಅರಸರ ನಂತರ ಕೆಳದಿಅರಸರ ಕಾಲದಲ್ಲಿ ಮುಂದುವರಿದು ತಮ್ಮ ಅಸ್ಥಿತ್ವ ಕಾಪಾಡಿಕೊಂಡ ಸಾಹಿತ್ಯಗಳಲ್ಲಿ ವೀರಶೈವ ಸಾಹಿತ್ಯವು ಒಂದು. ಈ ಕಾಲದಲ್ಲಿ ಶೃಂಗೇರಿಯ ಅದ್ವೈತಮಠ, ಉಡುಪಿಯ ದ್ವೈತಮಠದ ಜೊತೆಗೆ ಕ್ರಿಶ್ಚಿಯನ್ನರು ಮತ್ತು ಮುಸ್ಲಿಂರ ಪ್ರಭಾವ ಕೂಡ ಕಂಡುಬಂದಿದೆ. ಹೀಗೆ ಮುಂದುವರಿದ ವೀರಶೈವ ಮಠಗಳ ಶೈಕ್ಷಣಿಕ ಕಾರ್ಯಕ್ಷೇತ್ರ ೧೯ ಮತ್ತು ೨೦ನೇ ಶತಮಾನದಲ್ಲಿ ಮುಗಿಲೆತ್ತರ ಬೆಳೆದಿರುವುದು ಕಂಡುಬರುತ್ತದೆ.

ಕ್ರಿ.ಶ ೧೭೫೭ರಲ್ಲಿ ನಡೆದ ಪ್ಲಾಸಿ ಕದನದಿಂದ ಭಾರತದ ಇತಿಹಾಸದಲ್ಲಿ ಇಂಗ್ಲೀಷ್ ಯುಗವು ಆರಂಭವಾಯಿತು. ಈಸ್ಟ್ಇಂಡಿಯಾ ಕಂಪನಿಯು ಆಡಳಿತದ ಜೊತೆಗೆ ಭಾರತದ ಉಳಿದ ಭಾಗಗಳಲ್ಲಿಯಂತೆ ಕರ್ನಾಟಕದಲ್ಲೂ ವಿದ್ಯಾಕ್ಷೇತ್ರಕ್ಕೆ ಕ್ರಿಶ್ಚಿಯನ್ ಮಿಷನರಿಗಳು ತಮ್ಮ ಕಾರ್ಯ ಚಟುವಟಿಕೆ ಆರಂಬಿಸಿದವು. ಈ ಮಿಷನರಿಗಳು ಸ್ಥಾಪಿಸಿದ ವಿದ್ಯಾಶಾಲೆಗಳಿಗೆ ಸರ್ಕಾರದಿಂದ

---

೭. G.S.Gaddigimath , Ilid . Page – 261

೮. Education in Ancient India. Page – 184

ಧನಸಹಾಯವು ದೊರೆಯುತ್ತಿತ್ತು. ಮೈಸೂರಿನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಆಳ್ವಿಕೆಯ ಕಾಲದಲ್ಲಿ ಸುಮಾರು ಕ್ರಿ.ಶ. ೧೮೩೩ರಲ್ಲಿ ಇಂಗ್ಲೀಷ್ ಶಾಲೆಯೊಂದು ಸ್ಥಾಪಿತವಾಯಿತು. ಇದರ ಫಲವಾಗಿ ಕರ್ನಾಟಕದ ಇತರ ಭಾಗಗಳಲ್ಲಿಯೂ ಇಂಗ್ಲೀಷ್ ಶಾಲೆಗಳು ಕಾಣಿಸಿಕೊಂಡವು. ಇಂಗ್ಲೀಷ್ ಶಾಲೆಗಳ ಜೊತೆ ಜೊತೆಗೆ ದೇಶಿ ಶಾಲೆಗಳು ಸಮಾನಂತರವಾಗಿ ಮುಂದುವರಿದ್ದವು. ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವ ವೈದಿಕ ಪಾಠಶಾಲೆಗಳಿದ್ದವು. ಪರಂಪರಾಗತ ಶಾಲೆಗಳಿದ್ದು ಅವುಗಳಲ್ಲಿ ವೀರಶೈವ ಅಧ್ಯಾಪಕರು ಸೇವೆ ಸಲ್ಲಿಸುತ್ತಿದ್ದರು. ಕ್ರಿ.ಶ.೧೯ನೇ ಶತಮಾನದ ಕೊನೆಯವರೆಗೆ ಈ ಶಾಲೆಗಳು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿದವು. ಈ ವೇಳೆಗೆ ಭಾರತದ ಉಳಿದ ಭಾಗಗಳಂತೆ ಕರ್ನಾಟಕದಲ್ಲಿಯೂ ಪಾಶ್ಚಿಮಾತ್ಯ ಅದರಲ್ಲಿಯೂ ಇಂಗ್ಲೆಂಡಿನ ವಿಚಾರಧಾರೆ ಹಾಗೂ ಸಂಸ್ಕೃತಿಯ ನಿಕಟಸಂಪರ್ಕ ಬಂದಿತ್ತು. ಬ್ರಿಟಿಷ್ ಸರ್ಕಾರವು ಪ್ರಾದೇಶಿಕ ಭಾಷೆಗಳ ಅಧ್ಯಯನವನ್ನು ಪ್ರೋತ್ಸಹಿಸಲಿಲ್ಲ. ಈ ಅವಧಿಯಲ್ಲಿ ದೇಶಿ ಶಾಲೆಗಳ ಮೂಲಕ ಕನ್ನಡ ಭಾಷೆಯನ್ನು ಬೋಧಿಸುವ ದಿಟ್ಟ ನಿಲುವು ತಾಳಿದ್ದು, ಮತ್ತು ಅದನ್ನು ಮುಂದುವರಿಸಿಕೊಂಡು ಬಂದ ಕೀರ್ತಿ ಈ ವೀರಶೈವ ಮಠಗಳಿಗೆ ಸಲ್ಲುತ್ತದೆ. ಬ್ರಿಟಿಷ್ ಸರ್ಕಾರದ ಆಳ್ವಿಕೆಯ ನಡುವೆಯು ಈ ಮಠಮಾನ್ಯಗಳು ದೇಶಿ ಶಿಕ್ಷಣಕ್ಕೆ ಒತ್ತು ಕೊಟ್ಟು ಭಾಷಾ ಬೆಳವಣಿಗೆಯ ಜೊತೆಗೆ ನಮ್ಮ ಸಂಸ್ಕೃತಿ ಮತ್ತು ಸಂಪ್ರಾದಾಯಗಳನ್ನು ಮುಂದುವರಿಸುವ ಕಾರ್ಯ ನಿರ್ವಹಿಸಿರುವುದನ್ನು ಕಾಣಬಹುದು.

ಮೈಸೂರು ಅರಸರ ಆಳ್ವಿಕೆಗೆ ನೇರವಾಗಿ ಒಳಪಟ್ಟ ನಂತರ ಆಧುನಿಕ ಶಿಕ್ಷಣ ಪದ್ಧತಿ ಆರಂಭಿಸಿತು. ಖಾಸಗಿ ಶಿಕ್ಷಣಸಂಸ್ಥೆಗಳು ಪ್ರಾರಂಭವಾದವು. ಆದರೆ ಆಧುನಿಕ ಶಿಕ್ಷಣಕ್ಕೆ ಹೆಚ್ಚು ಒತ್ತುಕೊಡಲಾಗಲಿಲ್ಲ. ಇದಕ್ಕೆ ಪೂರಕವಾಗಿ ಅಂದಿದ್ದ ಬೇರೆ ಬೇರೆ ಮಠಗಳು ಸಹ ಗಮನ ಹರಿಸಲಿಲ್ಲ. ಆದರೆ ಈ ವ್ಯವಸ್ಥೆಗೆ ವಿರುದ್ಧವಾಗಿ ಆಧುನಿಕ ಶಿಕ್ಷಣಕ್ರಮದ ಮಹತ್ವವನ್ನು ಮೊಟ್ಟ ಮೊದಲು ಅರಿತವರು ಈ ವೀರಶೈವ ಮಠಾಧೀಪತಿಗಳೇ ಎಂಬುದು ನಿರ್ವಿವಾದ.

ಈ ವೀರಶೈವ ಮಠಗಳು ೨೦ನೇ ಶತಮಾನದ ಅವಶ್ಯಕತೆಗಳಿಗನುಸಾರವಾಗಿ ತಮ್ಮ ವಿಚಾರ ಧಾರೆಯನ್ನು ಬದಲಿಸಿ ಜಾತ್ಯತೀತವಾಗಿ ಶಿಕ್ಷಣಪ್ರಚಾರ ಕಾರ್ಯ ಕೈಗೊಳ್ಳುವ ಧ್ಯೇಯವನ್ನು ಇಟ್ಟುಕೊಂಡರು. ಈ ಧರ್ಮಗುರುಗಳೇ ವಿದ್ಯಾ ಪ್ರಚಾರಕ್ಕೆ ತೊಡಗಿದಾಗ, ಶಿಕ್ಷಣ ಮಹತ್ವ ಶಿಕ್ಷಣ ಸಂಸ್ಥೆಗಳ ಸ್ಥಾನಮಾನ ಹೆಚ್ಚಿ ಜನತೆ ಇವರ ಮೇಲೆ ನಂಬಿಕೆ ಇಟ್ಟು ಉಧಾರವಾಗಿ ಧಾನ ದೇಣಿಗೆಗಳನ್ನು ಸಲ್ಲಿಸಲು ಮುಂದಾಯಿತು. ಈ ವಿದ್ಯಾಸಂಸ್ಥೆಗಳು ಶಿಕ್ಷಣದ ವಿವಿಧ ಹಂತಗಳಲ್ಲಿ ಸ್ಥಿರವಾಗಿ ನಿಂತು ಕಾರ್ಯ ನಿರ್ವಹಿಸುವಂತಾಯಿತು. ಇಂದು ನೂರಾರು ವೀರಶೈವ ವಿದ್ಯಾಸಂಸ್ಥೆಗಳು ಶಿಕ್ಷಣದ ವಿವಿಧ ಮಜಲುಗಳಲ್ಲಿ ಸೇವೆ ಸಲ್ಲಿಸುತ್ತಿವೆ. ಬಡ ಹಾಗೂ ಮೇಧಾವಿ

ವಿದ್ಯಾರ್ಥಿಗಳು ಹಾಗೂ ಸಮಾಜದಎಲ್ಲಾ ಸ್ಥರದ ವಿದ್ಯಾರ್ಥಿಗಳಿಗೂ ಉಚಿತ ವಿದ್ಯಾರ್ಥಿನಿಲಯಗಳು ಮತ್ತು ವಿದ್ಯಾರ್ಥಿ ವೇತನಗಳನ್ನು ನೀಡುತ್ತಿವೆ. ಉಚಿತ ಜ್ಞಾನದಾಸೋಹ, ಅನ್ನ ದಾಸೋಹ ಮತ್ತು ಅಕ್ಷರದಾಸೋಹ ನೀಡುತ್ತ ಸಮಾಜಕ್ಕೆ ಮಾಧರಿಯಾಗಿದೆ. ಹೀಗೆ ಇಂಗ್ಲೀಷ್ ಪ್ರಭಾವವನ್ನು ತಿಳಿದ ಈ ಪ್ರಗತಿಶೀಲ ಮಠಗಳು ಆ ವಿದ್ಯಾಭ್ಯಾಸ ಕ್ರಮದ ಸತ್ವವನ್ನು ಸ್ವೀಕರಿಸಿ ತಮ್ಮ ವಿದ್ಯಾಸಂಸ್ಥೆಗಳಲ್ಲಿ ಅಳವಡಿಸಿಕೊಂಡವು.

ಇಂದು ಕನ್ನಡ ನಾಡಿನಲ್ಲಿ ಬಹು ಸಂಖ್ಯಾ ವೀರಶೈವಮಠಗಳೂ, ಸಂಘಗಳೂ ಸಾವಿರಾರು ವಿದ್ಯಾಸಂಸ್ಥೆಗಳನ್ನು ನಡೆಸುತ್ತಿವೆ ಅವಿಗಳೆಲ್ಲದನ್ನು ಬಿಡಿ ಬಿಡಿಯಾಗಿ ವಿವರಿಸಲು ಕಷ್ಟಸಾಧ್ಯ. ಅವುಗಳಲ್ಲಿ ಪ್ರಮುಖವಾಗಿರುವ ಕೆಲವು ಮಠಗಳು ಉಲ್ಲೇಖನಿಯವಾದವು. ಕರ್ನಾಟಕ ಲಿಬರಲ್ ಎಜುಕೇಶನ್ ಸೊಸೈಟಿ ಬೆಳಗಾವಿ, ಕರ್ನಾಟಕ ಲಿಂಗಾಯಿತ ಎಜುಕೇಶನ್ ಸೊಸೈಟಿ ಬಾಗಲಕೋಟೆ' ವಿದ್ಯಾವರ್ಧಕ ಸಂಘ–ಬಾಗಲಕೋಟೆ. ಬಿಜಾಪುರದ ಲಿಂಗಾಯಿತ ಡಿಸ್ಟ್ರಿರ್ ಎಜುಕೇಶನ್ ಅಸೋಸಿಯೇಶನ್ ಬಿಜಾಪುರ, ವೀರಶೈವ ವಿದ್ಯಾವರ್ಧಕ ಸಂಘ ಬಳ್ಳಾರಿ. ಇನ್ನೂ ಮುಂತಾದ ಅನೇಕ ವೀರಶೈವ ಮಠಮಾನ್ಯ ಮತ್ತು ಸಂಘ ಸಂಸ್ಥೆಗಳು ಅವಿರತವಾಗಿ ಶಿಕ್ಷಣಪ್ರಸಾರಕ್ಕೆ ತಮ್ಮನ್ನು ತಾವೇ ಸಮರ್ಪಿಸಿ ಕೊಂಡಿವೆ. ಇಂದು ವಿದ್ಯಾಕ್ಷೇತ್ರದಲ್ಲಿ ಮಹತ್ವ ಪೂರ್ಣ ಕಾರ್ಯ ನಿರ್ವಹಿಸುತ್ತಿರುವ ಅನೇಕ ವೀರಶೈವ ಮಠಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹೆಸರುವಾಸಿಯಾಗಿವೆ. ಈ ಮಠಗಳು ವೀರಶೈವ ಸಂಘಗಳು ಶಿಕ್ಷಣದ ವಿವಿಧ ಹಂತಗಳಲ್ಲಿ ವಿದ್ಯಾ ಸಂಸ್ಥೆಗಳನ್ನು ಆರಂಭಿಸಿವೆ. ಶಿಶು ವಿಹಾರಗಳು, ಪ್ರಾಥಮಿಕ , ಮಾಧ್ಯಮಿಕ , ಪದವಿಪೂರ್ವ ಮತ್ತು ಪದವಿ ಕಾಲೇಜುಗಳು ಜೊತೆಗೆ ಇತ್ತೀಚಿಗೆ ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲದೆ, ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇಂಜಿನಿಯರಿಂಗ್ ಕಾಲೇಜು, ಪಾರ್ಮಸಿ ಕಾಲೇಜು, ದಂತ ವೈದ್ಯಕೀಯ, ಶಿಕ್ಷಕರ ತರಬೇತಿ ಸಂಸ್ಥೆಗಳು, ವಾಣಿಜ್ಯ ಕಾಲೇಜುಗಳು, ಕಾನೂನು ಪದವಿ ಕಾಲೇಜುಗಳು,ಮಹಿಳೆಯರಿಗಾಗಿ ಶಾಲಾಕಾಲೇಜುಗಳು ಮತ್ತು ವಸತಿನಿಲಯಗಳು, ಅನಾಥಾಲಯಗಳು, ಪ್ರಸಾದನಿಲಯಗಳು, ಸಂಸ್ಕೃತ ಕಾಲೇಜುಗಳು ಹೀಗೆ ಶಿಕ್ಷಣದ ಎಲ್ಲಾ ವಿಭಾಗಗಳ ಶಿಕ್ಷಣ ನೀಡುತ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ವಸತಿನಿಲಯವ್ಯವಸ್ಥೆ, ವಿದ್ಯಾರ್ಥಿವೇತನ ಸೌಲಭ್ಯ ಕಲ್ಪಿಸಿಕೊಡುತ್ತ ಸಮಾಜಕ್ಕೆ ಅಪಾರವಾದ ಕೊಡುಗೆ ನೀಡುತ್ತಿವೆ.

ಸದ್ಯಕ್ಕೆ ವೀರಶೈವ ಮಠಗಳು ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸುತ್ತಿರುವ ಸೇವೆ ಮಹತ್ವ ಪೂರ್ಣವಾಗಿದೆ. ಈಮಠಾಧಿಪತಿಗಳು ಸಮಾಜದ ಬಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನ ಕೊಟ್ಟಿರುವುದು ಕಂಡು ಬರುತ್ತದೆ. ವಿದ್ಯಾರ್ಥಿ ವಸತಿನಿಲಯಗಳಲ್ಲಿ ಯಾವುದೇ ಜಾತಿ–ಮತ

ಪಂಥವಿಲ್ಲದೆ ಎಲ್ಲರಿಗೂ ಸಮಾನ ಪ್ರವೇಶ ಕೊಡುತ್ತಿರುವುದು ಈ ವೀರಶೈವ ಮಠಗಳ ವೈಶಿಷ್ಟ್ಯಗಳಲ್ಲೊಂದು. ಭಾರತೀಯ ಸಂಸ್ಕೃತಿ-ಧರ್ಮರಕ್ಷಣೆಗಾಗಿ- ಸಂಸ್ಕೃತ ಶಾಲಾ ಕಾಲೇಜುಗಳನ್ನು ಈ ಮಠಗಳೇ ನಡೆಸುತ್ತಿವೆ. ಉನ್ನತ ಶಿಕ್ಷಣದ ಸೌಲಭ್ಯಗಳು ಜನಸಾಮಾನ್ಯರಿಗೆ ನಿಲುಕುವಂತೆ ಮಾಡಿದ್ದು ಈ ವೀರಶೈವ ಮಠಗಳೇ ಎಂದರೆ ತಪ್ಪಾಗಲಾರದು. ಸಮಾಜದಲ್ಲಿ ಅರ್ಧದಷ್ಟಿರುವ ಮಹಿಳೆಯರಲ್ಲಿ ಜಾಗೃತಿಯನ್ನುಂಟು ಮಾಡಲು ಅಕ್ಕನ ಬಳಗ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮುಂತಾದ ಸಾಂಸ್ಕೃತಿಕ ಸಂಘಗಳನ್ನು ಸಂಘಟಿಸಿವೆ. ಧಾರ್ಮಿಕ ಮತ್ತು ಸೃಜನಾತ್ಮಕ ಸಾಹಿತ್ಯ ಪ್ರಕಾಶನ ಕಾರ್ಯವನ್ನು ಕೈಗೊಂಡು ಕನ್ನಡ ಭಾಷೆ ಸಾಹಿತ್ಯಗಳ ಏಳಿಗೆಗೆ ವೀರಶೈವ ಮಠಗಳು  ಶ್ರಮಿಸುತ್ತಿವೆ. ಇಂತಹ ಕರ್ನಾಟಕದ ಅನೇಕ ವೀರಶೈವ ಮಠಗಳು ಸಲ್ಲಿಸುವ ಸಾಹಿತ್ಯ, ಶೈಕ್ಷಣಿಕ ಸೇವೆಅನನ್ಯ. ಅಂತಹ ಅನೇಕ ಮಠಗಳಿವೆ ಅವುಗಳಲ್ಲಿ ಕೆಲವು ಮುಖ್ಯ ವೀರಶೈವ ಮಠಗಳು ನೀಡುತ್ತಿರುವ ಶಿಕ್ಷಣ ಸಂಸ್ಥೆಗಳ ಕಡೆ ಗಮನ ನೀಡಬಹುದು.

ಹನ್ನೆರಡನೇ  ಶತಮಾನದಲ್ಲಿ ಬಸವಾದಿ ಪ್ರಮಥರು ಭೋಧಿಸಿ ಆಚರಿಸಿದ ವಿಶ್ವಮಾನವನ ತತ್ವಗಳು ಆಧ್ಯಾತ್ಮಿಕ ತಳಹದಿಯ ಮೇಲೆ ಸರ್ವರಲ್ಲಿಯೂ ಸಮಾನತೆಯನ್ನು ಸ್ಥಾಪಿಸಿದವು. ಕಾಯಕ ಮತ್ತು ದಾಸೋಹಗಳ ಮೂಲಕ ಶಿಕ್ಷಣದಅರಿವು ಅನುಷ್ಠಾನಗೊಳಿಸುವುದರ ಮೂಲಕ ಜನರಲ್ಲಿಯ ಮೂಢನಂಬಿಕೆಗಳನ್ನು ಹೋಗಲಾಡಿಸುವುದರ ಜೊತೆಗೆ ವೈಚಾರಿಕತೆಯನ್ನು ಬೆಳೆಸುವ ಕೆಲಸ ಮಾಡಿದವು. ಸಮಾಜದಲ್ಲಿ ಸ್ತ್ರೀ-ಪುರುಷ ಭೇದಭಾವ ಹೋಗಲಾಡಿಸಿ ಸ್ತ್ರೀ ಸಮಾನತೆ ಮೂಡಿಸುವುದು ಈ ಮೂಲಕ ಸಮಾಜದಲ್ಲಿ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಿದ್ದಾರೆ. ಸಮಾಜವನ್ನು ತಿದ್ದಿ ಜನತೆಯನ್ನು ಸನ್ಮಾರ್ಗಕ್ಕೆ ತರುವುದರಲ್ಲಿ  ಮಠಗಳ ಪಾತ್ರ ಅವಿಸ್ಮರಣೀಯ. ಈ ದಿಕ್ಕಿನಲ್ಲಿ ವೀರಶೈವ ಮಠಗಳು ಶತಶತಮಾನಗಳಿಂದಲೂ ಜನತೆಯ ಬೌದ್ಧಿಕ ಮತ್ತು ಪಾರಮಾರ್ಥಿಕ ಬದುಕನ್ನು ಹಸನುಗೊಳಿಸಿ ಮಾನವ ಕಲ್ಯಾಣಕ್ಕೆ ಸದಾ ಜಾಗೃತಿವಹಿಸಿರುವುದು ಕಂಡು ಬರುತ್ತದೆ. ಈ ಮಠಗಳೂ ಮಾನವನ ವಿಕಾಸ  ಶಿಕ್ಷಣದಿಂದಲೆ ಎಂಬುದನ್ನು ಮೊದಲೆ ಮನಗಂಡು  ಅಕ್ಷರಜ್ಞಾನ, ನೈತಿಕತೆ, ಧಾರ್ಮಿಕ ಮತ್ತು ಸಾಂಸ್ಕೃತಿಕ ಶಿಕ್ಷಣವನ್ನು ನೀಡುವುದರ ಮೂಲಕ ಪ್ರತಿ ಹಳ್ಳಿ ಹಳ್ಳಿಗಳಲ್ಲೂ ಶಿಕ್ಷಣ ಕೇಂದ್ರಗಳ ಜೊತೆಗೆ ಕೆಲವೆಡೆ ಮಠಗಳೇ ಶಿಕ್ಷಣ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ. ಅಂತಹ ಅನೇಕ ಮಠಗಳು ಪ್ರಾಚೀನ ಕಾಲದಿಂದಲೂ ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದುತ್ತ,  ಆಧುನಿಕ ಶಿಕ್ಷಣ ಪದ್ಧತಿ ನೀಡುತ್ತ ಕರ್ನಾಟಕ ಕನ್ನಡ ಜನತೆಯ ಜ್ಞಾನವಿಕಾಶಕ್ಕೆ ಕಾರಣವಾಗಿವೆ.

"ಸೋಹಂ ಸೋಹಂ ಎಂದೆನಿಸಿದೆ ದಾಸೋಹಂ ಎಂದೆನಿಸಯ್ಯ" ಎನ್ನುವ ಶರಣರವಾಣಿಯಲ್ಲಿ ಜೀವನ ಪರವಾದ ಸಮಾಜ ಮುಖಿಯಾದ ಕಳಕಳಿಯಿದೆ. 'ದಾನ' ಎಂಬರ್ಥದ

ವೈದಿಕ ವಾಣಿಯಲ್ಲಿ ಕೊಡುವವ ಹಾಗೂ ಪಡೆಯುವವರಿದ್ದು ಅನುಕ್ರಮವಾಗಿ ಅಹಂಭಾವ ಮತ್ತು ಹೀನಭಾವಗಳು ಅವರವರ ಮನದಾಳದಲ್ಲಿ ಹುಟ್ಟುಯುತ್ತವೆ. ಈ ಕಾರಣಕ್ಕಾಗೆ ಶರಣರು 'ದಾನ'ಕ್ಕೆ ಪರ್ಯಾಯವಾಗಿ ದಾಸೋಹವನ್ನೂ ಆರಂಭಿಸಿದರು. ಇಲ್ಲಿ ಕೊಡುವನೆಂದೆಂಬ ಅಹಂಭಾವವು ಇರುವುದಿಲ್ಲ. ಇಲ್ಲಿರುವುದು ಶುದ್ಧ ಮನಸ್ಸಿನ ನಿರ್ಲಿಪ್ತತೆಯ 'ಅನುಭಾವ' ಮಾತ್ರ. ಇಂಥ ನೈಜ ಸತ್ಯದ ತಳಹದಿಯ ಮೇಲೆ ಅರಿವು, ಅನ್ನ ಮತ್ತು ಆಶ್ರಯ ನೀಡಿ ತ್ರಿವಿಧ ದಾಸೋಹ ಮಾಡುವ ಸೇವಾ ಕೈಂಕಾರ್ಯವನ್ನು ವೀರಶೈವ ಮಠಗಳು ಮತ್ತು ಸಂಘ ಸಂಸ್ಥೆಗಳು ನಡೆಸುತ್ತಲೆ ಬಂದಿವೆ."[೯] ಇವುಗಳಗರ್ಭದಲ್ಲಿ ಉದಯಿಸಿದ 'ವೀರಶೈವ ಪ್ರಸಾದ'ನಿಲಯಗಳು ಕ್ರಮೇಣ ವೀರಶೈವ 'ವಿದ್ಯಾರ್ಥಿನಿಲಯ'ಗಳಾಗಿ ಇಂದು ಅಸಂಖ್ಯಾತ ಆಶಕ್ತ ವಿದ್ಯಾರ್ಥಿಗಳಿಗೆ ಆಶ್ರಯತಾಣವಾಗಿವೆ, ಬಾಳ್ವೆಯ ಬೆಳಕಾಗಿವೆ. ಪ್ರಾಥಮಿಕ, ಪ್ರೌಢ, ಪದವಿ, ಸ್ನಾತಕೋತ್ತರ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣ ನೀಡುತ್ತಿವೆ. ಆಮೂಲಕ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಈ ಪ್ರಸಾದನಿಲಯಗಳು ನೀಡುತ್ತಿರುವ ಸೇವೆ ಅವಿಸ್ಮರಣೀಯ. ಇಂದು ಕರ್ನಾಟಕದ ಈ ವೀರಶೈವ ಮಠಮಾನ್ಯಗಳು ರಾಜ್ಯ, ದೇಶ ಮತ್ತು ವಿದೇಶಗಳಲ್ಲಿ ನೂರಾರು ಸಂಖ್ಯೆಯಲ್ಲಿವೆ. ಇಲ್ಲಿರುವ ವೀರಶೈವ ಪ್ರಸಾದ ನಿಲಯಗಳು ಅನಂತವಾಗಿವೆ. ಶಿಕ್ಷಣದ ಪ್ರಸಾರದ ಜೊತೆಗೆ ಸಾಮಾಜಿಕ ಕಳಕಳಿಯಿಂದ ಪ್ರಸ್ತುತ ಸಮಾಜದ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗಿರುವ ಹಲವಾರು ಮಠಗಳು ಶ್ರಮಿಸುತ್ತಿವೆ. ಅಂತ ಮಠಗಳಲ್ಲಿ ಪ್ರಮುಖವಾದವುವೆಂದರೆ **ಶ್ರೀಸಿದ್ಧಗಂಗಾ ಮಠ** ಶ್ರೀ ಮಠವು ೧೯೧೭ರಲ್ಲಿ ಶ್ರೀ ಉದ್ಯಾನ ಶಿವಯೋಗಿಗಳ ಕೃಪೆಯಿಂದ ಚಿಕ್ಕದಾಗಿ ಆರಂಬಿಸಿದ ವೇದ ಮತ್ತು ಸಂಸ್ಕೃತ ಪಾಠಶಾಲೆಯಿಂದ ನಾಂದಿಯಾಗಿ ಶ್ರೀಶಿವಕುಮಾರಸ್ವಾಮಿಗಳ ದೂರದರ್ಶಿತ್ವದ ಫಲವಾಗಿನ ಕಿರಿಯ ಶ್ರೀಗಳ ಕ್ರಿಯಾಶೀಲತೆಯಿಂದ ಇಂದು ಶಿಕ್ಷಣದ ಎಲ್ಲಿ ರಂಗಗಳಲ್ಲೂ ಸುಮಾರು ೧೨೫ ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ.

**ಚಿತ್ರದುರ್ಗದ ಶ್ರೀಬೃಹನ್ಮಠ** : ಈ ಮಠವು ೧೯೦೩ ರಿಂದಲೆ ಶಿಕ್ಷಣ ಕಾರ್ಯ ಆರಂಭಿಸಿರುವುದು ಕಂಡುಬರುತ್ತದೆ. ಶ್ರೀ ಮರಳೇಗವಿ ಮಠವು ಕೂಡ ಶಿಕ್ಷಣದಲ್ಲಿ ಅನನ್ಯ ಸೇವೆ ಸಲ್ಲಿಸಿರುವುದು ತಿಳಿದು ಬರುತ್ತದೆ. ೧೯೭೦ರಲ್ಲಿ ಬಾಲಾಪರಾದಿಗಳಿಗಾಗಿ 'ಆಶ್ರಯ ಶಾಲೆ' ಸ್ಥಾಪಿಸಿ ಆ ಮೂಲಕ ಇಲ್ಲಿ ಸುಮಾರು ೧೨೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಜ್ಞಾನಾರ್ಜನೆ ಪಡೆದಿದ್ದಾರೆ. ತರಳಬಾಳು ಬೃಹನ್ಮಠ ಶ್ರೀಮುರುಘ ಮಠ ಧಾರವಾಡ ಶ್ರೀದೇಗುಲ ಮಠ, ಕೊಪ್ಪಳ ಗವಿಮಟ, ಭಾಲ್ಕೀಹೇಮಠ, ಶ್ರೀ ಜಗದ್ಗುರು ಮೂರುಸಾವಿರಮಠ ಕೊಟ್ಟೂರು ಸ್ವಾಮಿ ಸಂಸ್ಥಾನ ಮಠ ಹೊಸಪೇಟೆ, ಗುಲ್ಬರ್ಗ

---

೯. ವೀರಶೈವ ಮಠಗಳ ಜ್ಞಾನಂನ್ನ ದಾಸೂಹ– ಮಹದೇವಸ್ವಾಮಿ ಹೆಗ್ಗೊಠಾರ ಮಹಾ ಸಂಗಮ
ಸಂ.ಮಲೆಯೂರು ಗುರುಸ್ವಾಮಿ ಪುಟ – ೧೨೫

ಶರಣ ಬಸವೇಶ್ವರ ಮಹಾದಾಸೋಹ ಪೀಠ, ಬಾಳೆಹೊನ್ನೂರು ರಂಭಾಪುರಿಜಗದ್ಗುರು ರೇಣುಕಾಚಾರ್ಯಪೀಠ. ಶ್ರೀಶೈಲನಿಡುಮಾಮಿಡಿ ಮಹಾ ಸಂಸ್ಥಾನ ಮಠ, ಗದುಗಿನ ತೋಂಟದಾರ್ಯಮಠ, ಮುಂಡರಗಿ ಜಗದ್ಗುರುಶ್ರೀಅನ್ನದಾನೇಶ್ವರಮಠ, ಬಿಜಾಪುರ ಶ್ರೀಬಂಥನಾಳ ಮಠ, ಮುಳಗುಂದದ ಶ್ರೀ ಗವಿಮಠ, ಶ್ರೀ ಸರ್ಪಭೂಷಣ ಶಿವಯೋಗಿ ಮಠ ಬಳ್ಳಾರಿ ಕಾನಾಮಡಗು ದಾಸೋಹಮಠ, ಕೊಪ್ಪಳ ಶ್ರೀಸಿದ್ದರಾಮೇಶ್ವರ ಸಂಸ್ಥಾನಮಠ. ಗದಗ ಶ್ರೀ ಜಗದ್ಗುರು ಶಿವಾನಂದ ಬೃಹನ್ಮಠ ಬಳಗಾನೂರು, ಶ್ರೀಮಠ ಗದಗ ಕೋಣ್ಣೂರು ಶ್ರೀ ವಿರಕ್ತ ಮಠ-ಬೈರನಹಳ್ಳಿ, ನಳಗುಂದದ ಶ್ರೀ ದೊರೆಸ್ವಾಮಿಮಠ ಮುಂಡರಗಿ ಶ್ರೀ ಹಾಲೇಶ್ವರ ಕೃಪಾ ಪೋಷಿತ ಶಿವಯೋಗಿ ಗ್ರಾಮ. ಮಹಂತಪುರದ ಶ್ರೀ ಮಹಂತೇಶ್ವರ ಮಠ, ಗುಲ್ಬರ್ಗದ ಶ್ರೀ ಸಿದ್ದದಲಿಂಗೇಶ್ವರ ಸಂಸ್ಥಾನಮಠ' ಅಳಂದ ತಾಲ್ಲೂಕಿನ ಶ್ರೀ ಶಿವಲಿಂಗೇಶ್ವರ ಹಿರೇಮಠ, ಗುಲ್ಬರ್ಗದ ಶ್ರೀ ಗುರುಬಸವ ಬೃಹನ್ಮಠ, ಶ್ರೀ ಚಾದಪುರಿ ಮಠ, ಚಿತ್ತಾಪುರದ ರಾವೂರಿನ ವಿರಕ್ತ ಮಠ, ಜೇವರಿಗಿಯ ಶ್ರೀ ಷಣ್ಮುಗ-ಶಿವಯೋಗಿಮಠ, ಶ್ರೀ ಶಿವಾನಂದೇಶ್ವರ ವಿರಕ್ತಮಠ, ಸೊನ್ನ, ಶ್ರೀ ಅಡವಿಮಠ, ಪಡಗೂರು, ಹಳ್ಳದ ಶ್ರೀ ವಿರಕ್ತಮಠ, ಶ್ರೀಸಿದ್ದಲಿಂಗೇಶ್ವರ ವಿರಕ್ತಮಠ, ಮುರುಘರಾಜೇಂದ್ರ ಮಠ, ಮರಿಯಾಲ ಶ್ರೀ ಜಾಬಾಲಿಪುರಮಠ, ಚಿಕ್ಕಮಗಳೂರು , ಚಿತ್ರದುರ್ಗದ ಶ್ರೀಉಜಯನಿಮಠ, ಸಾಣೆಹಳ್ಳೀ ತರಳಬಾಳುಸಂಸ್ಥಾನಮಠ, ಅಂಕನಹಳ್ಳಿ ಶ್ರೀಗವಿಮಠ, ಚಿತ್ರದುರ್ಗ ತ್ರಿಪುರಾಂತೇಶ್ವರ ಮಠ, ಹೊಸಕೆರೆ ಬೆಟ್ಟದಹಳ್ಳಿ ಶ್ರೀಗವಿಮಠ, ಸಂದಸ್ಥಾನ ಸ್ಥಿರ ಪಟ್ಟಾಧ್ಯಕ್ಷರ ಮಠ, ಶಿಡ್ಲೆಹಳ್ಳಿ ಶ್ರೀ ಬಳ್ಳೆಕಟ್ಟೆ ಸಂಸ್ಥಾನಮಠ ಕೆರೆಕೊಡಿ, ಶ್ರೀರಂಗಪುರಮಠ, ತಿಪಟೂರು ಶ್ರೀಜಂಗಮ ಮಠ-ಮಂಗಳೂರು, ಶ್ರೀರುದ್ರೇಶ್ವರವಿರಕ್ತ ಮಠ, ಶ್ರೀ ಹಾಲುಸಿದ್ದೇಶ್ವರ ಬೃಹನ್ಮಠ , ಶ್ರೀ ಪಂಚಗ್ರಹ ಹಿರೇಮಠ, ಶ್ರೀಮಡಿವಾಳ ಶಿವಯೋಗಿಗಳ ಮಠ, ಶ್ರೀ ದಾಸೋಹಮಠ ಅಡ್ಡೂರು., ಶ್ರೀ ಹನ್ನೆರಡುಮಠ, ಶ್ರೀವಿರಕ್ತಮಠ, ಶ್ರೀಓಲೆಮಠ, ಶ್ರೀ ಅಡವಿಸಿದ್ದೇಶ್ವರಮಠ, ಶ್ರೀ ಗುರುಲಿಂಗೇಶ್ವರ ಪಂಚ ಗ್ರಹ ಹಿರೇಮಠ ಶ್ರೀ ದುರದಂಡೇಶ್ವರ ಮಠ- ಮಲ್ಲಾಪುರ, ಶ್ರೀಮುರುಘಾಮಠ- ಗುಳೇದಗುಡ್ಡ, ಶ್ರೀಒಪ್ಪತ್ತೇಶ್ವರಮಠ, ಶ್ರೀಗಚ್ಚಿನಮಠ, ಆಮೀನಮಠ, ಶ್ರೀ ಚಿತ್ತರಗಿ ವಿಜಯಮಹಂತೇಶ್ವರಮಠ, ಇಳಕಲ್ಲ ಶ್ರೀ ಹೊಳಹುಚೇಶ್ವರ ಸಂಸ್ಥಾನ ಕಮತಗಿ ಶ್ರೀ ಗವಿಮಠ ಬೊಮ್ಮನಹಳ್ಳಿ, ಶ್ರೀ ನೂರೊಂದೇಶ್ವರ ವಿರಕ್ತಮಠ ಮೋರಟಗಿ, ಶ್ರೀ ಸಾರಂಗಮಠ ಸಿಂದಗಿ, ಶ್ರೀ ಗುರುಬಸವೇಶ್ವರ ಸಂಸ್ಥಾನಮಠ ಹುಲುಸೂರು, ಶ್ರೀ ವಿರಕ್ತಮಠಬಾತಾಂದ್ರ, ಶ್ರೀ ಹಿರೇಮಠ ಚಾಂಬೋಳಿ ಶ್ರೀ ಕಂಚುಗಲ್ ಬಂಡೇ ಮಠ, ಶ್ರೀ ಹೊನ್ನಮಗವಿ ಸಂಸ್ಥಾನ ಮಠ ಶಿವಗಂಗೆ ಇನ್ನು ಅನೇಕ ವೀರಶೈವ ಮಠಗಳ ಜೊತೆಗೆ ನಾನಾ ವೀರಶೈವ ಸಂಘ ಸಂಸ್ಥೆಗಳು ಶಿಕ್ಷಣಕ್ಕೆ ಅಮೋಘ ಕೊಡುಗೆ ನೀಡಿದೆ ನೀಡುತ್ತ ಬಂದಿವೆ ನೀಡುತ್ತಿದೆ ಎಂಬುದನ್ನು ನಾವು ಅಧ್ಯಯನದ ಮೂಲಕ ಗಮನಿಸಬಹುದು.

ಮೈಸೂರುಜಿಲ್ಲೆಯ ವೀರಶೈವಮಠಗಳು ನೀಡುರುವ ಶೈಕ್ಷಣಿಕ ಕೊಡುಗೆಯ ಬಗ್ಗೆ ಅವಲೋಕಿಸುವುದಾದರೆ ತುಂಬಾ ಹಳೆಯ ಮತ್ತು ಇತ್ತೀಚಿನ ಆಧುನಿಕತೆಯ ಶಿಕ್ಷಣ ನೀಡುತ್ತಿರುವ ಈ ಪ್ರಾಂತ್ಯದ ವಿಶ್ವವಿಖ್ಯಾತವಾದ ಮತ್ತು ಅತ್ಯಂತ ಪ್ರಾಚೀತನತೆ ಮತ್ತು ಐತಿಹಾಸಿಕ ಹಿನ್ನಲೆಯುಳ್ಳ ಶ್ರೀಸುತ್ತೂರು ಮಠವೇ ಅತ್ಯಂತ ಪುರಾತನವಾದುದು. ಸ್ವಾತಂತ್ರ್ಯ ಪೂರ್ವದಿಂದಲೂ ಶ್ರೀ ಮಠವು ಬಡವ ಶ್ರೀಮಂತರೆನ್ನದೆ ಎಲ್ಲರಿಗೂ ಶಿಕ್ಷಣ ನೀಡುವ ನಿಟ್ಟಿನಲ್ಲಿ ಆರಂಭವಾಯಿತು. ಆ ಮೂಲಕ ಮಾನವನ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ನಾಗರೀಕ ಬೆಳವಣಿಗೆಗೆ ನಾಂದಿಯಾಡಿತು, ಈ ಪರಂಪರೆಯಲ್ಲೆ ಮೈಸೂರು ಜಿಲ್ಲೆಯ ಹಲವಾರು ಮಠಗಳು ಸೇವೆಸಲ್ಲಿಸುತ್ತಿವೆ. ಹಾಗೂ ಶೈಕ್ಷಣಿಕ ರಂಗದಲ್ಲಿ ಅಪಾರವಾದ ಕೊಡುಗೆ ಸಲ್ಲಿಸುತ್ತಿವೆ. ಜ್ಞಾನ ದಾಸೋಹ, ಅನ್ನ ದಾಸೋಹದಷ್ಟೆ ಮುಖ್ಯ ಅಕ್ಷರದಾಸೋಹ ಎಂಬುದನ್ನು ಮನಗಂಡು ಶಿಕ್ಷಣ ಪ್ರಸಾರ ಕೇಂದ್ರಗಳಾಗಿ ಶೈಕ್ಷಣಿಕ' ಪರಿವರ್ತನೆಗೆ ಈ ವೀರಶೈವ ಮಠಗಳು ಕಾರಣವಾದವು. ಮೈಸೂರು ಜಿಲ್ಲೆಯಲ್ಲಿರುವ ಸುಮಾರು ೮೦ಕ್ಕೂ ಹೆಚ್ಚು ವೀರಶೈವಮಠಗಳಲ್ಲಿ ಕೆಲವು ಮಠಗಳು ಶಿಕ್ಷಣಕ್ಕೆ ಆಧ್ಯತೆ ನೀಡಿವೆ.ಅಂಥ ಕೆಲವು ಮಠಗಳನ್ನು ಮಾತ್ರ ಅಧ್ಯಯನದ ದೃಷ್ಟಿಯಲ್ಲಿ ಗಮನಿಸಬಹುದು. ೧.ಸುತ್ತೂರುಮಠ ೨. ದೇವನೂರುಮಠ ೩.ಹೊಸಮಠ ೪.ಬೆಟ್ಟದಪುರದಮಠ ೫.ರಾವಂದೂರು ಮಠ ೬.ಕರ್ಪೂರವಳ್ಳಿಮಠ ೭.ಮಾಡ್ರಳ್ಳಿಮಠ ೮. ಮಾದಾಪುರಚಂದ್ರಮೌಳೇಶ್ವರಮಠ ೯.ಮೇದಿನಿಮಠ ಪ್ರಮುಖವಾದವು ಇದಲ್ಲದೆ ಇನ್ನೂ ಅನೇಕ ಮಠಗಳು ಎಲೆಮರೆಯ ಕಾಯಿಯಂತೆ ಶಿಕ್ಷಣಸಂಸ್ಥೆ ರಹಿತವಾಗಿ ಜ್ಞಾನಾನ್ನ ಮತ್ತು ಅಕ್ಷರದಾಸೋಹ ನಡೆಸುತ್ತ ಸಾಮಾಜಿಕ ಪರಿವರ್ತನೆಗೆ ತಮ್ಮನ್ನು ತೊಡಗಿಸಿಕೊಂಡಿವೆ.

ಸುತ್ತೂರು ಮಠವು ಶೈಕ್ಷಣಿಕ ರಂಗಕ್ಕೆ ನೀಡಿರುವ ಸೇವೆ ಅಸಾಧಾರಣವಾದುದು. ಇದು ಮೈಸೂರು ಜಿಲ್ಲೆಯಲ್ಲಿ ಅತ್ಯಂತ ಪುರಾತನವಾದ ಮಠವಾಗಿದೆ. ಶ್ರೀ ಮಠವು ಇಂದು ಕರ್ನಾಟಕದಲ್ಲೇ ಬಹುಮುಖ ಶೈಕ್ಷಣಿಕ ಸೇವೆಸಲ್ಲಿಸುವ ಮಠಗಳ ಸಾಲಿನಲ್ಲಿ ಶ್ರೀಮಠವು ಮೊದಲ ಸ್ಥಾನದಲ್ಲಿದೆ. ಕ್ರಿ.ಶ ೯ನೇ ಶತಮಾನದಿಂದ ೧೩ನೇ ಶತಮಾನದವರೆಗೆ ಆಳಿದ ಚೋಳ ರಾಜ್ಯವು ತನ್ನ ವೈಭವ ಹಾಗೂ ಜ್ಞಾನ ಪ್ರಸಾರ ಮುಂತಾದ ವಿಷಯಗಳಲ್ಲಿ ಪ್ರಸಿದ್ಧಿಯನ್ನು ಪಡೆದಿತ್ತು. ಈ ಅರಸರು ಅನೇಕ ದೇವಾಸ್ಥಾನಗಳನ್ನು ಸ್ಥಾಪಿಸಿದರು. ಜೋಳವಂಶದ ಅರಸರು ಶ್ರೀ ಸುತ್ತೂರಮಠದ ಮೂಲಕ ಜ್ಞಾನಪ್ರಸಾರವನ್ನು ಕೈಗೊಂಡರೆಂಬುದು ಅಧ್ಯಯನದಿಂದ ತಿಳಿದುಬರುತ್ತದೆ.

ಶ್ರೀ ಸುತ್ತೂರು ವೀರಸಿಂಹಾಸನ ಮಠವು ಕ್ರಿ.ಶ ೧೦ನೇ ಶತಮಾನದಲ್ಲಿ ಆದಿಜಗದ್ಗುರು ಶ್ರೀಶಿವರಾತ್ರೀಶ್ವರಮಹಾಸ್ವಾಮಿಯರ ಆಶೀರ್ವಾದಿಂದಸ್ಥಾಪಿತವಾಯಿತು. ಸನಾತನ ಸಂಪ್ರಾದಾಯಗಳ

ಸಾಂಸ್ಕೃತಿಕ ತಳಹದಿಯ ಮೇಲೆ ಸಮೊಜೋಧಾರ್ಮಿಕ ಸುಧಾರಣೆಯೆಂಬ ಮಹತ್ತರವಾದ ಕಾರ್ಯವನ್ನು ಈ ಮಠವು ಆಗನಿಂದಲೇ ಪ್ರಾರಂಭಿಸಿತು. ಕಳೆದ ಶತಮಾನದಿಂದಲೂ ಧಾರ್ಮಿಕಕ್ಷೇತ್ರದಲ್ಲಿ ತೊಡಗಿಸಿಕೊಂಡ ಮಠವು ೧೯ನೇ ಶತಮಾನದ ಮಧ್ಯ ಭಾಗದ ತನಕ ಧಾರ್ಮಿಕ ಪ್ರಗತಿಯ ಕಡೆಗೆ ಹೆಚ್ಚಿನ ಆದ್ಯತೆ ನೀಡಿದ್ದು, ನಂತರದ ದಿನಗಳಲ್ಲಿ ಸುಮಾರು ೨೦ನೇ ಶತಮಾನದ ಆರಂಭದಲ್ಲಿ ಶ್ರೀಮಠದಲ್ಲಿ ಪರ್ವಕಾಲ ಆರಂಭವಾಯಿತು. ಈ ಮಠದಚರಿತ್ರೆಯಲ್ಲೆ ಯುಗಪ್ರವರ್ತಕ ಅವಧಿಯು, ಏಕೆಂದರೆ ಸುತ್ತೂರು ವೀರಸಿಂಹಾಸನಾಧೀಶ್ವರ ಶ್ರೀ ಶಿವಯೋಗಿ ಶ್ರೀಶಿವರಾತ್ರೀಶ್ವರ ಮಹಾಸ್ವಾಮಿಗಳು, ಮತ್ತು ಇತರ ಕರಕಮಲ ಸಂಜಾತರಾಗಿ ಉತ್ತರಾಧಿಕಾರಿಗಳಾದ ಶ್ರೀ ಶಿವರಾತ್ರಿ ರಾಜೇಂದ್ರಮಹಾಸ್ವಾಮಿಗಳವರು ಹಾಗೂ ಪ್ರಸ್ತುತ ಜಗದ್ಗುರುಗಳಾದ ಶ್ರೀ ಶವರಾತ್ರೀಶ್ವರದೇಶಿಕೇಂದ್ರ ಸ್ವಾಮಿಗಳವರು. ಈ ಮೂವರು ತ್ರಿಮೂರ್ತಿಗಳು ಜನಸಾಮಾನ್ಯರ ಏಳಿಗೆಗೆ, ಸಾಮಾಜಿಕ,ಧಾರ್ಮಿಕಮತ್ತುನಾಗರೀಕ ಬದಲಾವಣೆಗೆ, ಶಿಕ್ಷಣ ಜ್ಞಾನಾರ್ಜನೆಯ ಅವಶ್ಯಕತೆಯನ್ನು ಮನಗಂಡರು. ತಮ್ಮಶಿಷ್ಯ ಸಮಾಜದ ಆರ್ಥಿಕ ಮತ್ತು ಶೈಕ್ಷಣಿಕ ಮಟ್ಟವನ್ನು ಸುಧಾರಿಸುವುದಕ್ಕಾಗಿ ವಿವಿಧ ಬಗೆಯ ವಿದ್ಯಾಸಂಸ್ಥೆಗಳನ್ನು ಮಠದ ಆಶ್ರಯದಲ್ಲಿ ಪ್ರಾರಂಭಿಸಿದರು. ಪ್ರಾಚೀನ ಭಾರತೀಯ ಸಾಹಿತ್ಯ ಅಧ್ಯಯನ ಮಾಡಲು ಶಿಷ್ಯ ಸಮಾಜವು ಉತ್ಸುಕರಾಗಿರುವುದನ್ನು ಗಮನಿಸಿದ ಶ್ರೀ ಶಿವಯೋಗಿ ಶಿವರಾತ್ರೀಶ್ವರರರು ಎಲ್ಲ ಸಮಾಜದ ಜನರಿಗೂ ಸಂಸ್ಕೃತ ಭಾಷೆಯನ್ನು ಕಲಿಯುವ ಅವಕಾಶವನ್ನು ನೀಡುವುದಕ್ಕಾಗಿ  ತುಂಬಾ ಶ್ರಮ ಪಟ್ಟರು. ಕ್ಯಾತನಹಳ್ಳಿ ಸಾಹುಕಾರ್ ಸಿದ್ದಲಿಂಗಯ್ಯನವರ ಉದಾರ ಸ್ಥಳ ಮತ್ತು ಧನ ಸಹಾಯದಿಂದ ಮೈಸೂರಿನ ವಾಣಿ ವಿಲಾಸ [ಈಗಿನ ಮಹಾತ್ಮ ಗಾಂಧಿ ರಸ್ತೆ [M.G.Road] ರಸ್ತೆಯಲ್ಲಿ ಕ್ರಿ.ಶ ೧೯೩೩ (೧೯೩೩) ರಲ್ಲಿ 'ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯನ್ನು ಶ್ರೀ ಸುತ್ತೂರುಮಠದ ಆಶ್ರಯದಲ್ಲಿ ಪ್ರಾರಂಭಿಸಲಾಯಿತು. ಅದಕ್ಕೆ ಹೊಂದಿಕೊಂಡಂತೆ ಒಂದು ಉಚಿತ ವಿದ್ಯಾರ್ಥಿನಿಲಯವನ್ನು ಸಹ ಆರಂಭಿಸಲಾಯಿತು. ವಿದ್ಯಾ ಪ್ರಸಾರ ಶೈಕ್ಷಣಿಕ ರಂಗದಲ್ಲಿ ಶ್ರೀ ಸುತ್ತೂರು ಮಠವು ಇಟ್ಟ  ಮೊದಲ ಹೆಜ್ಜೆಯಾಗಿ ಶೈಕ್ಷಣಿಕ ರಂಗದ ಸಾಧನೆಗೆ ಈ ಸಂಸ್ಕೃತ ಪಾಠಶಾಲೆ ನಾಂದಿಯಾಯಿತು ಎನ್ನಬಹುದು. ೪೦ ವಿದ್ಯಾರ್ಥಿಗಳೊಂದಿಗೆ ಆರಂಭವಾದ ಈ ಪಾಠಶಾಲೆಯಲ್ಲಿ ಇಂದಿಗೂ ೨೦೦ ರಿಂದ ೩೦೦ ವಿದ್ಯಾರ್ಥಿಗಳು ಸಂಸ್ಕೃತ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈಭಾಷೆಯ ಮೂಲಕ ಉನ್ನತ ವ್ಯಾಸಂಗ ಮಾಡಲು ಅವಕಾಶ ಕಲ್ಪಿಸಲಾಗಿದೆ. ಇಲ್ಲಿ ಅಧ್ಯಯನ ಮಾಡಿದ ಅನೇಕರು ಇಂದು ದೇಶ, ವಿದೇಶದ ನಾನಾ ಕಡೆಗಳಲ್ಲಿ ಉನ್ನತವಾದ ಹುದ್ದೆಗಳನ್ನು ಅಲಂಕರಿಸಿರುವುದು ತಿಳಿದುಬರುತ್ತದೆ. ಮೈಸೂರು ನಗರದಲ್ಲಿ ಈ ಸಂಸ್ಕೃತ

ಪಾಠಶಾಲೆಯಿಂದ ಸ್ಫೂರ್ತಿ ಪಡೆದ ಅನೇಕ ವೀರಶೈವ ಮಠಗಳು ಮತ್ತು ಧಾರ್ಮಿಕ ಸಂಘ ಸಂಸ್ಥೆಗಳು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾರಂಭಿಸಿದವು.

ಜಗದ್ಗುರು ಶ್ರೀಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಗ್ರಾಮೀಣ ಪ್ರದೇಶದ ಜನತೆಗೆ ಆಧುನಿಕ ರೀತಿ–ನೀತಿ ಪದ್ಧತಿಯ ಶಿಕ್ಷಣ ಕೊಡದ ಹೊರತು ನಮ್ಮ ದೇಶ ಪ್ರಗತಿಯಾಗದು ಎಂಬುದನ್ನು ಮನಗಂಡರು. ಈ ಆಲೋಚನೆಯ ಫಲಶೃತಿಯ ರೂಪವಾಗಿ ಕ್ರಿ.ಶ.೧೯೪೦ರಲ್ಲಿ ಮೈಸೂರು ನಗರದಲ್ಲಿ 'ಶ್ರೀಜಗದ್ಗುರು ಶಿವರಾತ್ರೀಶ್ವರ ಉಚಿತವಿದ್ಯಾರ್ಥಿನಿಲಯ' ಸ್ಥಾಪಿಸಿದರು. ಈ ಮೂಲಕ ಗ್ರಾಮೀಣ ಪ್ರದೇಶದ ಬಡವಿದ್ಯಾರ್ಥಿಗಳಿಗೆ ಜಾತಿಮತದ ಬೇದವಿಲ್ಲದೆ ವಿದ್ಯಾಭ್ಯಾಸ ಮುಗಿಯುವವರೆಗೂ ಉಚಿತವಾಗಿ ಊಟ ಮತ್ತು ವಸತಿ ಕಲ್ಪಿಸಿಕೊಟ್ಟರು. ವೀರಶೈವ ಲಿಂಗಾಯಿತ ಸಮಾಜಕ್ಕೆ ಮಾತ್ರ ಸೀಮಿತವಾಗದೆ ಬ್ರಾಹ್ಮಣರಿಂದ ಹರಿಜನರವರೆಗೆ ಎಲ್ಲ ವರ್ಗದವರು ಸೇರಿದಂತೆ ಎಲ್ಲರಿಗೂ ಪ್ರವೇಶ ಕೊಡುವ ಹೊಸ ಕ್ರಾಂತಿಕಾರ ಬದಲಾವಣೆಗೆ ಜಗದ್ಗುರುಗಳು ದಾರಿ ದೀಪವಾಗಿ ಕಾರಣಭೂತರಾದರು. ಹತ್ತು ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವುದರೊಂದಿಗೆ ಆರಂಭವಾದ ಈ ವಿದ್ಯಾರ್ಥಿನಿಲಯದಲ್ಲಿ ಇಂದು ೫೦೦ ರಿಂದ ೧೦೦೦ ತನಕ ವಿದ್ಯಾರ್ಥಿಗಳು ಉಚಿತ ಊಟ ಮತ್ತು ವಸತಿ ಸೌಲಭ್ಯ ಪಡೆದು ಜ್ಞಾನಾರ್ಜನೆ ಮಾಡುತ್ತಿದ್ದಾರೆ. ದಿನಗಳು ಉರುಳಿದಂತೆ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ಪಟ್ಟಣದೆಡೆಗೆ ಬರುವುದನ್ನು ಗಮನಿಸಿದ ಶ್ರೀಗಳು ೧೯೫೬ರಲ್ಲಿ ಮೈಸೂರಿನಲ್ಲಿ ಮತ್ತೊಂದು ಶ್ರೀಶಿವರಾತ್ರೀಶ್ವರ ವಿದ್ಯಾರ್ಥಿನಿಲಯ ಪ್ರಾರಂಭಿಸಿದರು. ಸಾಮಾಜಿಕವಾಗಿ ಜೀವನದ ದೃಷ್ಟಿಕೋನದಲ್ಲಿ ತಿರುವು ಕೊಡುವ ಉತ್ಸಾಹದಿಂದ ಮೊದಲ ಬಾರಿಗೆ ೧೨ನೇ ಶತಮಾನವನ್ನು ಬಿಟ್ಟರೆ ೨೦ನೇಶತಮಾನದಲ್ಲಿ ಸುತ್ತೂರುಮಠದ ಆಶ್ರಯದಲ್ಲಿ ಕ್ರಿ.ಶ ೧೯೫೬ರಲ್ಲಿ ಮೈಸೂರಿನಲ್ಲಿರುವ ಗಾಂಧಿನಗರದಲ್ಲಿ "ಶ್ರೀಶಿವರಾತ್ರೀಶ್ವರ ದಲಿತವರ್ಗಗಳ ವಸತಿಗೃಹವನ್ನು ಆರಂಭಿಸಲಾಯಿತು. ಇದು ಸುತ್ತೂರು ಶ್ರೀಗಳವರ ಜಾತ್ಯತೀತ ಮನೋಭಾವನೆಗೆ ಸಾಕ್ಷಿಯಾಯಿತು.

ಸುತ್ತೂರು ವೀರಸಿಂಹಾಸನಮಠವು ತನ್ನ ಶಾಖೆಗಳನ್ನು ಸುತ್ತಮುತ್ತಲೂ ತೆರೆಯಲು ಪ್ರಾರಂಭಿಸಿತು. ಈ ಶಾಖಾಮಠಗಳ ಮಠಾಧಿಪತಿಗಳಿಗೆ ತರಭೇತಿ ನೀಡಿ ಸಾಮಾಜೋಧಾರ್ಮಿಕ ಬದಲಾವಣೆಗೆ ಮೊದಲು ರೂಪುಗೊಳ್ಳಲು ಈ ಬಾವಿ ಶ್ರೀಗಳಿಗೆ ನಾನಾ ರೀತಿ ಧಾರ್ಮಿಕ ಸಾಮಾಜಿಕ ಕರ್ತವ್ಯ ನಿರ್ವಹಣೆಗೆ ಅನುಕೂಲವಾಗುವಂತೆ ಶಾಸ್ತ್ರಾಭ್ಯಾಸ ಮತ್ತು ಯೋಗ ಸಾಧನೆಗಳಿಗೆ ಅವಕಾಶ ನೀಡಲು, ಇಂಥ ಗುರುಗಳಿಗೆ ತರಬೇತಿ ನೀಡುವ ಸಲುವಾಗಿ 'ಗುರುಕುಲ' ಎಂಬ ಸಂಸ್ಥೆಯನ್ನು ಕ್ರಿ.ಶ ೧೯೫೦ರಲ್ಲಿ ಸ್ಥಾಪಿಸಲಾಯಿತು.ಇಲ್ಲಿ ಎಲ್ಲಾ ರೀತಿಯ ಪೂರ್ವ

ಪರಂಪರೆಯ ಆಶ್ರಮಗಳ ಮಾದರಿಯಲ್ಲೇ, ಈ ಗುರುಗಳಿಗೆ ತರಬೇತಿ ಶಿಕ್ಷಣ ಕಾರ್ಯನಿರ್ವಹಿಸುವ ಜವಾಬ್ದಾರಿಗಳನ್ನು ಗುರುಕುಲಗಳ ಮೂಲಕ ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದಿದೆ.

ಇಂಥ ಮಠವು ವಿದ್ಯಾಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ಸಮಾಜ ಮರೆಯುವಂತಿಲ್ಲ. ಸೂತ್ತೂರುಮಠವು ಕರ್ನಾಟಕ ರಾಜ್ಯದಲ್ಲೆ ಪ್ರಸಿದ್ಧ ಮಠಗಳಲ್ಲಿ ಒಂದಾಗಿದೆ. ಶ್ರೀ ಮಠದ ಗುರು ಪರಂಪರೆಯಲ್ಲಿ ಇಲ್ಲಿಯವರೆಗೂ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರಿಂದ ಈಗಿನ ಪರಮಪೂಜ್ಯ  ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳವರೆಗೆ ೨೪ ಜಗದ್ಗುರುಗಳು ನಡೆದು ಬಂದಿರುವುದು ಕಂಡು ಬರುತ್ತದೆ. ಈ ಶ್ರೀ ಮಠದಪೀಠಾಧಿಪತಿಗಳಾಗಿದ್ದ ಎಲ್ಲಾ ಜಗದ್ಗುರುಗಳು ಮನುಕುಲದ ಉದ್ಧಾರಕ್ಕಾಗಿ ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಮೈಸೂರು ಜಿಲ್ಲೆಯಾದ್ಯಂತ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ.

"ಸುತ್ತೂರು ಪೀಠದ ೨೩ನೇ ಗುರುಗಳಿಗೆ ಕಾಯಕಯೋಗಿ ಮಹಾನ್ ಮಾನವತವಾದಿ ಲಿಂಗೈಕ್ಯ ಡಾ. ರಾಜೇಂದ್ರ ಮಹಾಸ್ವಾಮಿಗಳು ಕರ್ನಾಟಕ ಮತ್ತು ನೆರೆಯ ರಾಜ್ಯವಾದ ತಮಿಳುನಾಡಿನಲ್ಲಿ ಶ್ರೀಮಠದ ಕಾರ್ಯಕ್ಷೇತ್ರವನ್ನು ಶೈಕ್ಷಣಿಕವಾಗಿ ವಿಸ್ತರಿಸಿ ಸರ್ವರಿಂದಲ್ಲೂ ಪ್ರಶಂಸೆಗೆ ಪಾತ್ರರಾಗಿದ್ದರು. ಪೂಜ್ಯ ಶ್ರೀ ಗುರುಗಳೇ ಕ್ರಿ.ಶ ೧೯೫೪ರಲ್ಲಿ 'ಜೆ.ಎಸ್.ಎಸ್ ಮಹಾವಿದ್ಯಾಪೀಠ'ವನ್ನು ಸ್ಥಾಪಿಸಿದರು. ಪ್ರಾರಂಭದಲ್ಲಿ ಮೈಸೂರುನಗರ ಮತ್ತು ಮೈಸೂರು ಜಿಲ್ಲೆಯಾದ್ಯಂತ ಪ್ರಸಾದನಿಲಯ ಮತ್ತು ಶಾಲಾಕಾಲೇಜುಗಳನ್ನು ಆರಂಭಿಸಿ, ಜಾತಿ, ಮತ, ವರ್ಗ ಮತ್ತು ಲಿಂಗಭೇದವೆನ್ನದೆ ವಿದ್ಯಾರ್ಜನೆಯನ್ನು ಅರಸಿ ಬಂದ ಬಡವಿದ್ಯಾರ್ಥಿಗಳಿಗೆ ಉಚಿತ ಜ್ಞಾನಾನ್ನ ದಾಸೋಹವನ್ನು ನೀಡಿ ಅನೇಕ ವಿದ್ಯಾರ್ಥಿಗಳ ಬದುಕಿಗೆ ದಾರಿ ದೀಪವಾಗಿದ್ದಾರೆ."[೧೦]

ಧರ್ಮಪೀಠವಾಗಿದ್ದ  ಶ್ರೀಮಠವು ವಿದ್ಯಾಪೀಠವೂ ಆಗಿ ಪರಿವರ್ತನೆಗೊಂಡು ಸಮಾಜದ ಶೈಕ್ಷಣಿಕ ಬೆಳವಣಿಗೆಗೆ ಕಾರಣವಾಯಿತು. ಲಿಂಗೈಕ್ಯ ಜಗದ್ಗುರುಗಳವರ ಕರಕಮಲಸಂಜಾತರಾದ ಶ್ರೀಮಠದ ೨೪(ಇಪ್ಪನಾಲ್ಕು)ನೇ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ತಮ್ಮ ಹಿರಿಯ ಗುರುಗಳು ಸ್ಥಾಪಿಸಿದ ಜೆ.ಎಸ್.ಎಸ್ ಮಹಾವಿದ್ಯಾಪೀಠದ ಶೈಕ್ಷಣಿಕ ಕಾರ್ಯವ್ಯಾಪ್ತಿಯನ್ನು ಭಾರತದ ರಾಜಧಾನಿಯಾದ ದೆಹಲಿವರೆಗೂ ಎಲ್ಲಾ ಕ್ಷೇತ್ರಗಳಲ್ಲೂ, ಅದರಲ್ಲೂ ಪ್ರಮುಖವಾಗಿ ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ವಿಸ್ತರಿಸಿದರು. ಇಂದು ಜೆ.ಎಸ್.ಎಸ್

---

೧೦. ಅರ್ಚನ– ಜಿ.ಎಸ್.ಶಿವರುದ್ರಪ್ಪ  ಪುಟ – ೧೨೦

ಮಹಾವಿದ್ಯಾಪೀಠವನ್ನು ಒಂದು ವಿಶ್ವವಿದ್ಯಾನಿಲಯವನ್ನಾಗಿ ಮಾಡಿ ರಾಜ್ಯ, ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿ ತರುವಂತೆ ಕಾರ್ಯ ನಿರ್ವಹಿಸುವಂತೆ ಮಾಡಿದ್ದಾರೆ. ಇಂದು ಶ್ರೀಮಠದ ಶೈಕ್ಷಣಿಕ ಮತ್ತು ಧಾರ್ಮಿಕ ಶಾಖೆ ಅಮೆರಿಕಾ ದೇಶದಲ್ಲಿ ಕಾರ್ಯನಿರ್ವಹಿಸುತ್ತದೆ ಎಂಬುದು ಹೆಮ್ಮೆ ವಿಚಾರ. ಪೂಜ್ಯ ಶ್ರೀಗಳು ೨೧ನೇ ಶತಮಾನ ನಿರೀಕ್ಷಿಸುವ ಎಲ್ಲಾ ಸಾಧನೆಗಳನ್ನು ಮುಂಗಾಣುವ ದೂರದೃಷ್ಟಿಯುಳ್ಳವರೂ ಆ ಸಾಧನೆಗಳ ಸಿದ್ಧಿಗಾಗಿ ಈಗಾಗಲೆ ಕಾರ್ಯನಿರತರಾಗಿ ತಮ್ಮ ಹಿರಿಯ ಪೂಜ್ಯರ ಆಶಯದಂತೆ ಶೈಕ್ಷಣಿಕ ರಂಗದಲ್ಲಿ ಬಹುಮುಖ ಪ್ರಗತಿ ಗಳಿಸಿದ್ದಾರೆ. ಶ್ರೀಗಳು ಕಾಯಕ ತಪಸ್ವಿಗಳು, ವಿಚಾರಶೀಲರು, ಶ್ರೇಷ್ಟ ಉತ್ತಮ ವಾಗ್ಮಿಗಳಾಗಿದ್ದು ಅನೇಕ ಶ್ರೇಷ್ಟ ಸಾಹಿತ್ಯ ಕೃತಿಗಳನ್ನು ಸಂಪಾದಿಸಿದ್ದಾರೆ. ಪೂಜ್ಯರ ದಕ್ಷ, ಸಮರ್ಥ ಮಾರ್ಗದರ್ಶನದಲ್ಲಿ. ಜೆ.ಎಸ್.ಎಸ್ ಮಹಾವಿದ್ಯಾಪೀಠವು ಹೊಸ ಹೊಸ ಆಯಾಮಗಳ ಮೂಲಕ ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಪ್ರಗತಿಯ ಪಥದಲ್ಲಿ ಸಾಗುತ್ತ ಮುನ್ನಡೆಯುತ್ತಿರುವುದನ್ನು ನಾವು ಗಮನಿಸಬಹುದು.

ಈ ಧರ್ಮಪೀಠ ವಿದ್ಯಾಪೀಠವಾದ ಮೇಲೆ ಇದರ ಆಶ್ರಯದಲ್ಲಿ ನಡೆಯುತ್ತಿರುವ ಶೈಕ್ಷಣಿಕ ಸಂಸ್ಥೆಗಳಲ್ಲಿ ಎಲ್ಲಾ ವಿಧವಾದ ಶಿಕ್ಷಣ ದೊರೆಯುತ್ತಿದೆ. ಅಂದರೆ ಒಬ್ಬ ಎಳೆವಯಸ್ಸಿನ ಬಾಲಕ ಪೂರ್ವಪ್ರಾಥಮಿಕ ಶಾಲೆಯಿಂದ ವಿದ್ಯಾಭ್ಯಾಸ ಆರಂಭಿಸಿ ಪದವಿ, ಸ್ನಾತಕೋತ್ತರಪದವಿ ಮತ್ತು ಸಂಶೋಧನೆಯನ್ನು ಮಾಡಿ ಗೌರವ ಡಾಕ್ಟರೇಟ್ ಪದವಿಯನ್ನು ,ಈ ಜೆ.ಎಸ್.ಎಸ್ ವಿಶ್ವವಿದ್ಯಾನಿಲಯದ ಮೂಲಕ ಪಡೆಯಬಹುದು. ಜೆಎಸ್ಎಸ್ ವಿದ್ಯಾಪೀಠದ ವತಿಯಿಂದ ಕಳೆದ ಆರು ದಶಕಗಳ ಅವಧಿಯಲ್ಲಿ ೩೦೦ಕ್ಕೂ ಹೆಚ್ಚು ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳು ಸ್ಥಾಪಿಸಲ್ಪಟ್ಟಿವೆ. ಈ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಪ್ರತಿವರ್ಷ ೫೦,೦೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಜ್ಞಾನಾರ್ಜನೆಯಲ್ಲಿ ತೊಡಗಿದ್ದಾರೆ. ಈ ಜೆಎಸ್ಎಸ್ ವಿದ್ಯಾಪೀಠದಲ್ಲಿ ಸುಮಾರು ೧೦,೦೦೦ಕ್ಕಿಂತಲೂ ಹೆಚ್ಚು ಮಂದಿ ನೌಕಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಶೈಕ್ಷಣಿಕ ಹಿನ್ನಲೆಯನ್ನು ಗಮನಿಸಿ ಈ ವಿದ್ಯಾಪೀಠವು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳ ಸಂಖ್ಯೆ ವಿವರವನ್ನು ಸುಮಾರು ೧೯೫೪ ರಿಂದ ೨೦೧೩ರ ವರೆಗಿನ ವಿವರಗಳನ್ನು ನಾವು ಅಂಕ ಅಂಶಗಳ ಆಧಾರದ ಮೇಲೆ ಗಮನಿಸಬಹುದು.

೧. ಸಾಮನ್ಯ ಮತ್ತು ವೃತ್ತಿ ತರಬೇತಿ ಶಿಕ್ಷಣ ಸಂಸ್ಥೆಗಳು – ೧೫೦

೨. ತಾಂತ್ರಿಕ ಶಿಕ್ಷಣ ಮತ್ತು ವೈದ್ಯಕೀಯ ಶಿಕ್ಣ ಸಂಸ್ಥೆಗಳು – ೦೩೧

೩. ಸ್ಪರ್ಧಾತ್ಮಕ ಶಿಕ್ಷಣ ಸಂಸ್ಥೆ – ೦೦೧

೪. ಇತರೆ ಶಿಕ್ಷಣ ಸಂಸ್ಥೆಗಳು – ೦೦೫

೫. ವಿದ್ಯಾರ್ಥಿ ನಿಲಯಗಳು – ೦೦೭

**೧. ಸಾಮಾನ್ಯ ಮತ್ತು ವೃತ್ತಿ ತರಬೇತಿ ಶಿಕ್ಷಣ ಸಂಸ್ಥೆಗಳು :**

* **ಶಿಶುವಿಹಾರಗಳು ೦೭** (CRECHES)

೧. ಜಯನಗರ ಬೆಂಗಳೂರು

೨. ಡಾ.ಶಿವರಾತ್ರಿ ರಾಜೇಂದ್ರ ವೃತ್ತ ಮೈಸೂರು

೩. ಸರಸ್ವತಿಪುರಂ ಮೈಸೂರು

೪. ಸುತ್ತೂರು. ನಂಜನಗೂಡು ತಾಲ್ಲೂಕು

೫. ಹುಲ್ಲಹಳ್ಳಿ .ನಂಜನಗೂಡು ತಾಲ್ಲೂಕು.

೬. ಕಾಮಗೆರೆ .ಕೊಳ್ಳೇಗಾಲ ತಾಲ್ಲೂಕು.

೭. ರಾಮಪುರ. ಕೊಳ್ಳೇಗಾಲ ತಾಲ್ಲೂಕು.

* **ಪೂರ್ವ ಪ್ರಾಥಮಿಕ ಶಾಲೆಗಳು** (NURSERY SCHOOLS – 18)

೧. ಜಯನಗರ ಬೆಂಗಳೂರು (ಕನ್ನಡ ಮಾಧ್ಯಮ)

೨. ಜಯನಗರ ಬೆಂಗಳೂರು (ಆಂಗ್ಲ ಮಾಧ್ಯಮ)

೩. ಕೋಣನ ಕುಂಟೆ ಬೆಂಗಳೂರು (ಕನ್ನಡ ಮಾಧ್ಯಮ)

೪. ಸರಸ್ವತಿಪುರಂ ಮೈಸೂರು (ಕನ್ನಡ ಮಾಧ್ಯಮ)

೫. ಸರಸ್ವತಿಪುರಂ ಮೈಸೂರು (ಆಂಗ್ಲ ಮಾಧ್ಯಮ)

೬. ಡಾ.ಶಿವರಾತ್ರಿ ರಾಜೇಂದ್ರ ವೃತ್ತ ಮೈಸೂರು (ಆಂಗ್ಲ ಮಾಧ್ಯಮ)

೭. ಮೇಟಗಳ್ಳಿ ಮೈಸೂರು (ಆಂಗ್ಲ ಮಾಧ್ಯಮ)

೮. ಗಿರಿಯಬೋವಿ ಪಾಳ್ಯ ಮೈಸೂರು (ಆಂಗ್ಲ ಮಾಧ್ಯಮ)

೯. ಹುಲ್ಲಹಳ್ಳಿ ನಂಜನಗೂಡು ತಾಲ್ಲೂಕು.(ಆಂಗ್ಲ ಮಾಧ್ಯಮ)

೧೦. ಸುತ್ತೂರು ನಂಜನಗೂಡು ತಾಲ್ಲೂಕು.(ಆಂಗ್ಲ ಮಾಧ್ಯಮ)

೧೧. ಸಂತೆಮರಳ್ಳಿ ಚಾಮರಾಜನಗರ ತಾಲ್ಲೂಕು.

೧೨. ಬಾಚಹಳ್ಳಿ ಗುಂಡ್ಲುಪೇಟೆ ತಾಲ್ಲೂಕು. (ಆಂಗ್ಲ ಮಾಧ್ಯಮ)

೧೩. ರಾಮಪುರ ಕೊಳ್ಳೇಗಾಲ ತಾಲ್ಲೂಕು. (ಕನ್ನಡ ಮಾಧ್ಯಮ)

೧೪. ರಾಮಪುರ ಕೊಳ್ಳೇಗಾಲ ತಾಲ್ಲೂಕು. (ಆಂಗ್ಲ ಮಾಧ್ಯಮ)

೧೫. ಸರಗೂರು, ಹೆಗ್ಗಡದೇವನ ತಾಲ್ಲೂಕು.

೧೬. ಮಾಲೂರು, ಕೋಲಾರ ಜಿಲ್ಲೆ.(ಕನ್ನಡ ಮಾಧ್ಯಮ)

೧೭. ಲಕ್ಷ್ಮೀಪುರಂ ಮೈಸೂರು.

೧೮. ತಾಳವಾಡಿ ತಮಿಳುನಾಡು.

೧೯. ಉಚಿತ ವಸತಿ ಶಿಕ್ಷಣ ಸಂಸ್ಥೆ–ಸುತ್ತೂರು

*** ಸಹನ ಮಾನಸಿಕ ಬುದ್ಧಿಮಾಂಧ್ಯ ಮಕ್ಕಳ ಶಾಲೆಗಳು –೦೩**

೧. ಜಯನಗರ ಬೆಂಗಳೂರು.

೨. ಸರಸ್ವತಿಪುರಂ ಮೈಸೂರು.

೩. ಹೆಚ್.ಬಿ.ಆರ್. ಬಡಾವಣೆ ಬೆಂಗಳೂರು.

*** ಪ್ರಾಥಮಿಕ ಶಾಲೆಗಳು – ೧೯**

೧. ಜಯನಗರ ಬೆಂಗಳೂರು (ಕನ್ನಡ ಮಾಧ್ಯಮ)

೨. ಕೋಣನ ಕುಂಟೆ ಬೆಂಗಳೂರು (ಕನ್ನಡ ಮಾಧ್ಯಮ)

೩. ಸರಸ್ವತಿಪುರಂ ಮೈಸೂರು (ಕನ್ನಡ ಮಾಧ್ಯಮ)

೪. ಮಾಲೂರು, ಕೋಲಾರ ಜಿಲ್ಲೆ.(ಕನ್ನಡ ಮಾಧ್ಯಮ)

೫. ಜಯನಗರ ಬೆಂಗಳೂರು (ಆಂಗ್ಲ ಮಾಧ್ಯಮ)

೬. ಕೋಣನ ಕುಂಟೆ ಬೆಂಗಳೂರು (ಆಂಗ್ಲ ಮಾಧ್ಯಮ)

೭. ಡಾ.ಶಿವರಾತ್ರಿ ರಾಜೇಂದ್ರ ವೃತ್ತ ಮೈಸೂರು (ಆಂಗ್ಲ ಮಾಧ್ಯಮ)

೮. ಸರಸ್ವತಿಪುರಂ ಮೈಸೂರು (ಆಂಗ್ಲ ಮಾಧ್ಯಮ)

೯. ಮೇಟಗಳ್ಳಿ ಮೈಸೂರು (ಆಂಗ್ಲ ಮಾಧ್ಯಮ)

೧೦. ಹುಲ್ಲಹಳ್ಳಿ ನಂಜನಗೂಡು ತಾಲ್ಲೂಕು.(ಆಂಗ್ಲ ಮಾಧ್ಯಮ)

೧೧. ಗಿರಿಯಬೊವಿ ಪಾಳ್ಯ ಮೈಸೂರು (ಆಂಗ್ಲ ಮಾಧ್ಯಮ)

೧೨. ಲಕ್ಷ್ಮೀಪುರಂ ಮೈಸೂರು.

೧೩. ಸುತ್ತೂರು ನಂಜನಗೂಡು ತಾಲ್ಲೂಕು

೧೪. ಸಂತೆಮರಳ್ಳಿ ಚಾಮರಾಜನಗರ ತಾಲ್ಲೂಕು.

೧೫. ಕಾಮಗೆರೆ ಕೊಳ್ಳೇಗಾಲ ತಾಲ್ಲೂಕು.

೧೬. ರಾಮಪುರ ಕೊಳ್ಳೇಗಾಲ ತಾಲ್ಲೂಕು.

೧೭. ಸರಗೂರು, ಹೆಗ್ಗಡದೇವನ ತಾಲ್ಲೂಕು.

೧೮. ತಾಳವಾಡಿ ತಮಿಳುನಾಡು.

೧೯. ಉಚಿತ ವಸತಿ ಶಿಕ್ಷಣ ಸಂಸ್ಥೆ-ಸುತ್ತೂರು

*** ಪ್ರೌಢಶಾಲೆಗಳು – ೫೪**

೧. ಜಯನಗರ ಬೆಂಗಳೂರು.

೨. ಕೋಣನ ಕುಂಟೆ ಬೆಂಗಳೂರು (ಕನ್ನಡ ಮಾಧ್ಯಮ)

೩. ಹುಲ್ಲಹಳ್ಳಿ ನಂಜನಗೂಡು ತಾಲ್ಲೂಕು.(ಆಂಗ್ಲ ಮಾಧ್ಯಮ)

೪. ಕೋಣನ ಕುಂಟೆ ಬೆಂಗಳೂರು (ಆಂಗ್ಲ ಮಾಧ್ಯಮ)

೫. ಮೈಲಸಂದ್ರ ಬೆಂಗಳೂರು.

೬. ಲಕ್ಷ್ಮಿಪುರಂ ಮೈಸೂರು.

೭. ವಾಣಿವಿಲಾಸ ಮೈಸೂರು.

೮. ಸಿದ್ದಾರ್ಥನಗರ ಮೈಸೂರು.

೯. ನಾಚನಹಳ್ಳಿ ಪಾಳ್ಯ ಮೈಸೂರು.

೧೦. ಸರಸ್ವತಿಪುರಂ ಮೈಸೂರು.

೧೧. ಡಾ.ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು.

೧೨. ಗಿರಿಯಬೋವಿ ಪಾಳ್ಯ ಮೈಸೂರು.

೧೩. ಕುವೆಂಪುನಗರ ಮೈಸೂರು.

೧೪. ಶ್ರೀರಾಂಪುರ, ಮೈಸೂರು.

೧೫. ವಿಜಯನಗರ, ಮೈಸೂರು.

೧೬. ಉದಯಗಿರಿ, ಮೈಸೂರು.

೧೭. ಮೇಟಗಳ್ಳಿ, ಮೈಸೂರು.

೧೮. ದೇವಲಾಪುರ, ಮೈಸೂರು. ತಾಲ್ಲೂಕು.

೧೯. ಕೃಷ್ಣರಾಜನಗರ ಮೈಸೂರು ಜಿಲ್ಲೆ.

೨೦. ಸುತ್ತೂರು ನಂಜನಗೂಡು ತಾಲ್ಲೂಕು.

೨೧. ಸುತ್ತೂರು ಉಚಿತ ವಸತಿ ಪ್ರೌಢಶಾಲೆ ನಂಜನಗೂಡು ತಾಲ್ಲೂಕು.

೨೨. ಮಹದೇವಪುರ ನಂಜನಗೂಡು ತಾಲ್ಲೂಕು.

೨೩. ಹುಲ್ಲಹಳ್ಳಿ ಆಂಗ್ಲಮಾಧ್ಯಮ (ನಂಜನಗೂಡು ತಾಲ್ಲೂಕು.)

೨೪. ಚಾಮರಾಜನಗರ ಬಾಲಕರ ಪ್ರೌಢಶಾಲೆ.

೨೫. ಅರಕಲವಾಡಿ, (ಚಾಮರಾಜನಗರ ತಾಲ್ಲೂಕು.)

೨೬. ಉಮ್ಮತ್ತೂರು (ಚಾಮರಾಜನಗರ ತಾಲ್ಲೂಕು.)

೨೭. ಉಡಿಗಾಲ (ಚಾಮರಾಜನಗರ ತಾಲ್ಲೂಕು.)

೨೮. ಸಂತೆಮರಳ್ಳಿ (ಚಾಮರಾಜನಗರ ತಾಲ್ಲೂಕು.)

೨೯. ಹಳ್ಳಿಕೆರೆ ಹುಂಡಿ (ಚಾಮರಾಜನಗರ ತಾಲ್ಲೂಕು.)

೩೦. ತೆರಕಣಾಂಬಿ (ಗುಂಡ್ಲುಪೇಟೆ ತಾಲ್ಲೂಕು.)

೩೧. ಪಡಗೂರು (ಗುಂಡ್ಲುಪೇಟೆ ತಾಲ್ಲೂಕು.)

೩೨. ಬರಗಿ (ಗುಂಡ್ಲುಪೇಟೆ ತಾಲ್ಲೂಕು.)

೩೩. ಶಿವಪುರ (ಗುಂಡ್ಲುಪೇಟೆ ತಾಲ್ಲೂಕು.)

೩೪. ಹೊರೆಯಾಲ (ಗುಂಡ್ಲುಪೇಟೆ ತಾಲ್ಲೂಕು.)

೩೫. ಕೊಡಸೋಗೆ (ಗುಂಡ್ಲುಪೇಟೆ ತಾಲ್ಲೂಕು.)

೩೬. ಅಜ್ಜಿಪುರ, ಕೊಳ್ಳೇಗಾಲ ತಾಲ್ಲೂಕು.

೩೭. ಬಂಡಹಳ್ಳಿ , ಕೊಳ್ಳೇಗಾಲ ತಾಲ್ಲೂಕು.

೩೮. ಮುಡಿಗುಂಡ, ಕೊಳ್ಳೇಗಾಲ ತಾಲ್ಲೂಕು.

೩೯. ರಾಮಾಪುರ, ಕೊಳ್ಳೇಗಾಲ ತಾಲ್ಲೂಕು.

೪೦. ಗೌಡಹಳ್ಳೀ ಯಳಂದೂರು ತಾಲ್ಲೂಕು.

೪೧. ಬಾಲಕಿಯರ ಪ್ರೌಢಶಾಲೆ ಯಳಂದೂರು.

೪೨. ಕಲ್ಕುಣಿಕೆ, ಹುಣಸೂರು ತಾಲ್ಲೂಕು.

೪೩. ಹಾಡ್ಯ, ಕೃಷ್ಣರಾಜನಗರ ತಾಲ್ಲೂಕು.

೪೪. ಸರಗೂರು, ಹೆಗ್ಗಡದೇವನ ಕೋಟೆ.

೪೫. ಮನುಗನಹಳ್ಳಿ, ಹೆಗ್ಗಡದೇವನ ಕೋಟೆ.

೪೬. ಮೇಟಕುಪ್ಪೆ, ಹೆಗ್ಗಡದೇವನ ಕೋಟೆ.

೪೭. ವಿರಾಜಿಪುರ, ಮಳವಳ್ಳಿ ತಾಲ್ಲೂಕು. ಮಂಡ್ಯ ಜಿಲ್ಲೆ.

೪೮. ಮಾಗನೂರು, ಮಳವಳ್ಳಿ ತಾಲ್ಲೂಕು. ಮಂಡ್ಯ ಜಿಲ್ಲೆ.

೪೯. ದೊಡ್ಡಕಾಡನೂರು ಹೊಳೆನರಸೀಪುರ ತಾಲ್ಲೂಕು. ಹಾಸನ ಜಿಲ್ಲೆ.

೫೦. ನಾರ್ವೆ (ಓಡಾತಿಚಿಥಿ) ಬೇಲೂರು ತಾಲ್ಲೂಕು. ಹಾಸನ ಜಿಲ್ಲೆ.

೫೧. ಮಾಲೂರು ಕೋಲಾರ ಜಿಲ್ಲೆ.

೫೨. ಅರಕೆರೆ ಹೊನ್ನಾಳ್ಳಿ ತಾಲ್ಲೂಕು. ದಾವಣಗೆರೆ ಜಿಲ್ಲೆ.

೫೩. ಬಾಲಕಿಯರ ಪ್ರೌಢಶಾಲೆ ಚಾಮರಾಜನಗರ

೫೪. ಬಾಲಕಿಯರ ಪ್ರೌಢಶಾಲೆ ಕಾಮಗೆರೆ ಕೊಳ್ಳೆಗಾಲ ತಾಲ್ಲೂಕು.

*** ಜೆಎಸ್ಎಸ್ ಪಬ್ಲಿಕ್ ಶಾಲೆಗಳು –೧೦**

೧. ಬನಶಂಕರಿ ೨ನೇ ಹಂತ ಬೆಂಗಳೂರು.

೨. ಹೆಚ್.ಬಿ.ಆರ್. ಬಡವಾಣೆ, ಬೆಂಗಳೂರು.

೩. H.B.R. Layout, Bangalore.

೪. ಮಾಲೂರು ಕೋಲಾರ ಜಿಲ್ಲೆ.

೫. ಊಟಿ ತಮಿಳುನಾಡು.

೬. ಸಿದ್ಧಾರ್ಥನಗರ, ಮೈಸೂರು.

೭. SJCE ಕೇಂದ್ರ ಮೈಸೂರು.

೮. ಆರ್.ಬಿ.ಐ (RBI), ನಗರ ಮೈಸೂರು

೯. ಜೆ.ಪಿ.ನಗರ ಮೈಸೂರು.

೧೦. ಭಾಗೆ ಸಕಲೇಶಪುರ ತಾಲ್ಲೂಕು.

*** ಸಂಸ್ಕೃತ ಪಾಠಶಾಲೆಗಳು – ೧೦**

೧. ಜಯನಗರ , ಬೆಂಗಳೂರು.

೨. ವಾಣಿವಿಲಾಸ ರಸ್ತೆ ಮೈಸೂರು.

೩. ಸರಸ್ವತಿಪುರಂ ಮೈಸೂರು.

೪. ಸುತ್ತೂರು ನಂಜನಗೂಡು ತಾಲ್ಲೂಕು.

೫. ಹುಲ್ಲಹಳ್ಳಿ ನಂಜಗೂಡು ತಾಲ್ಲೂಕು.

೬. ಚಾಮರಾಜನಗರ

೭. ಕೃಷ್ಣರಾಜನಗರ

೮. ತೆರಕಣಾಂಬಿ ಗುಡ್ಲುಪೇಟೆ ತಾಲ್ಲೂಕು.

೯. ರಾಮಪುರ, ಕೊಳ್ಳೇಗಾಲ ತಾಲ್ಲೂಕು.

೧೦. ಸರಗೂರು, ಹೆಗ್ಗಡದೇವನ ಕೋಟೆ ತಾಲ್ಲೂಕು.

*** ವೇದ ಆಗಮ ಮತ್ತು ಜೋತಿಷ್ಯ ಪಾಠಶಾಲೆಗಳು – ೦೨**

೧. ವಾಣಿವಿಲಾಸ ರಸ್ತೆ, ಮೈಸೂರು.

೨. ಸುತ್ತೂರು ನಂಜನಗೂಡು. ತಾಲ್ಲೂಕು.

*** ಹಿಂದಿ ವಿದ್ಯಾಲಯಗಳು –೦೨**

೧. ಜಯನಗರ ಬೆಂಗಳೂರು.

೨. ಸರಸ್ವತಿಪುರ, ಮೈಸೂರು.

*** ಪದವಿ ಪೂರ್ವ ಕಾಲೇಜುಗಳು –೧೮**

೧. ಜಯನಗರ ಬೆಂಗಳೂರು.

೨. ಊಟಿ ರಸ್ತೆ ಮೈಸೂರು.

೩. ಜೆ.ಪಿ.ನಗರ ಮೈಸೂರು.

೪. ದೇವಲಾಪುರ, ಮೂಸೂರು ತಾಲ್ಲೂಕು.

೫. ನಂಜನಗೂಡು

೬. ಹುಲ್ಲಹಳ್ಳಿ ನಂಜನಗೂಡ ತಾಲ್ಲೂಕು.

೭. ರಾಮಪುರ ಕೊಳ್ಳೇಗಾಲ ತಾಲ್ಲೂಕು.

೮. ಮಾರ್ಟಳ್ಳಿ, ಕೊಳ್ಳೇಗಾಲ ತಾಲ್ಲೂಕು.

೯. ಕೊಳ್ಳೇಗಾಲ ಬಾಲಕಿಯರ ಪಿಯು ಕಾಲೇಜು.

೧೦. ಸರಗೂರು ಬಾಲಕಿಯರ ಪಿಯು ಕಾಲೇಜು, ಹೆಗ್ಗಡದೇವನಕೋಟೆ ತಾಲ್ಲೂಕು.

೧೧. ಯಳಂದೂರು ಬಾಲಕಿಯರ ಪಿಯು ಕಾಲೇಜು

೧೨. ಗುಂಡ್ಲುಪೇಟೆ ಬಾಲಕಿಯರ ಪಿಯು ಕಾಲೇಜು,

೧೩. ಸರಸ್ವತಿಪುರಂ ಬಾಲಕಿಯರ ಪಿಯು ಕಾಲೇಜು, ಮೈಸೂರು.

೧೪. ವೀರರಾಜಿಪುರ, ಮಳವಳ್ಳಿ ತಾಲ್ಲೂಕು.

೧೫. ದೊಡ್ಡ ಕಾಡನೂರು, ಹೊಳೆನರಸೀಪುರ ತಾಲ್ಲೂಕು. ಹಾಸನ ಜಿಲ್ಲೆ.

೧೬. ಮಾಲೂರು ಕೋಲಾ ಜಿಲ್ಲೆ.

೧೭. ಚಾಮರಾಜನಗರ ಬಾಲಕಿಯರ ಪದವಿ ಪೂರ್ವ ಕಾಲೇಜು

೧೮. ಸಕಲೇಶಪುರ ಪದವಿಪೂರ್ವ ಕಾಲೇಜು.

***ಪದವಿ ಕಾಲೇಜುಗಳು –೦೭**

೧. ಊಟಿ ರಸ್ತೆ, ಮೈಸೂರು.

೨. ಸರಸ್ವತಿಪುರಂ (ಮಹಿಳಾ) ಮೈಸೂರು.

೩. ಚಾಮರಾಜನಗರ (ಮಹಿಳಾ)

೪. ಕೊಳ್ಳೇಗಾಲ (ಮಹಿಳಾ)

೫. ಜಯನಗರ ಬೆಂಗಳೂರು (ಮಹಿಳಾ)

೬. ನಂಜನಗೂಡು

೭. ಗುಂಡ್ಲುಪೇಟೆ.

***ವೃತ್ತಿ ತರಬೇತಿ ಶಿಕ್ಷಣ ಸಂಸ್ಥೆಗಳು – ೨೦**

೧. IED ಜಯನಗರ , ಬೆಂಗಳೂರು.

೨. J.S.S ಮಹಿಳಾ ಡಿ.ಇಡಿ ಕಾಲೇಜು ಸರಸ್ವತಿಪುರಂ, ಮೈಸೂರು.

೩. NTTI (ಮಹಿಳಾ) ಸರಸ್ವತಿಪುರಂ ಮೈಸೂರು.

೪. J.S.S DED ಕಾಲೇಜು(ಪುರುಷರು) ದೊಡ್ಡಕಾಡನೂರು ಹೊಳೆನರಸೀಪುರ ತಾಲ್ಲೂಕು. ಹಾಸನ ಜಿಲ್ಲೆ.

೫. J.S.S ಡಿ.ಇಡಿ ಕಾಲೇಜು ಸುತ್ತೂರು ನಂಜನಗೂಡು ತಾಲ್ಲೂಕು.

೬. J.S.S ಡಿ.ಇಡಿ ಕಾಲೇಜು ಯಳಂದೂರು.

೭. J.S.S ಡಿ.ಇಡಿ ಕಾಲೇಜು ಸಕಲೇಶಪುರ ಹಾಸನ ಜಿಲ್ಲೆ.

೮. J.S.S ಡಿ.ಇಡಿ ಕಾಲೇಜು ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ.

೯. CPED ಕಾಲೇಜು, ಸುತ್ತೂರು.

೧೦. ಸಕಲೇಶಪುರ ಬಿ.ಇಡಿ ಕಾಲೇಜು, ಹಾಸನ ಜಿಲ್ಲೆ.

೧೧. ಸುತ್ತೂರು ಬಿ.ಇಡಿ ಕಾಲೇಜು, ಮೈಸೂರು ಜಿಲ್ಲೆ,

೧೨. ಚಾಮರಾಜನಗರ ಬಿ.ಇಡಿ ಕಾಲೇಜು

೧೩. ಬೆಂಗಳೂರು ಬಿ.ಇಡಿ ಕಾಲೇಜು

೧೪. ಹೂವಿನಹಡಗಲಿ ಬಿ.ಇಡಿ ಕಾಲೇಜು ಬಳ್ಳಾರಿ ಜಿಲ್ಲೆ.

೧೫. J.S.S ಕಾನೂನು ಕಾಲೇಜು ಕುವೆಂಪುನಗರ, ಮೈಸೂರು.

೧೬ ಸ್ಪರ್ಧಾತ್ಮಕ ಪರೀಕ್ಷ ತರಬೇತಿ ಕೇಂದ್ರ ಬೆಂಗಳೂರು. (Training Institute for Competitive Examination , Bangalore)

೧೭. JCERT ಮೈಸೂರು.

೧೮. ಆಧುನಿಕ ವೆಲ್ಡಿಂಡ್ ತರಬೇತಿ ಕೇಂದ್ರ ಮೈಸೂರು. (Advanced Welding Training Center)

೧೯ AJDTC, ಬೆಂಗಳೂರು.

೨೦. School of Fine Arts.

* J.S.S MANAGEMENT EDUCATION ENTERPRENURSHIP INSTITUTES -0೪

೧. Center for Management studies. SJCE Campus Mysore.

೨. SJCE STEP – Mysore.

೩. STEP ,ATE Bangalore.

೪. STEP ATC Noida , Delhi.

*** ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಸಂಸ್ಥೆಗಳು –೨೮**

೧. ಜಯ ಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು. ಮೈಸೂರು.

೨. J.S.S Academy of Technical Edication Bangalore.

೩. Academy of Technical Ediucation Noida – uttar Pradesh.

೪. Academy of Technical Education Mauritious.

೫. Research Foundation Mysore

೬. Pvt. LTD Companies -1 J.S.S Education Foundation Pvt. Ltd.Mysore.

೭. Polytechnic for Women, SJCE Campas Mysore.

೮. Polytechnic for Physically Handicapped SJCE Campas Mysore.

೯. Polytechnic (Co-Operative System of Education) Nanjangud.

೧೦. Polytechnic , SJCE campas Mysore.

೧೧. Nanjangud Industrial Training Cednter (ITC)

೧೨. ChamarajaNagr Industrial Training Cednter (ITC)\

೧೩. Talavadi Industrial Training Cednter (ITC), Tamilnadu.

*** INTERNATIONAL INSTITUTIONS -03**

೧೪. International institute of professional studies. SJCE Mysore.

೧೫. J.S.S Academy Ltd-Mauritius

೧೬. ಎ.ಐS Academy Dubai.

*** Medical Education**

೧೭. Medical college Mysore.

೧೮. Dental College Mysore.

೧೯. Ayurvedic College Mysore.

೨೦. College of Pharmacy Mysore.

೨೧. College of Pharmacy, Oaty Tamilnadu

***NURSING Colleges – 04**

೨೨. Nursing College Mysore.

೨೩. Nursing School Mysore.

೨೪. Nursing School Kollegal.

೨೫. Nursing School Sakaleshapur.

೨೬. Institute Of Speech and Hearing , Oaty Road Mysore.

೨೭. College of Physiotherapy Mysore.

೨೮. Institute of Naturopaty and Yogic Sciences Oaty Tamilnadu.

*** ಇತರೆ ಶಿಕ್ಷಣ ತರಬೇತಿ ಸಂಸ್ಥೆಗಳು**

೧. ಕರ್ನಾಟಕ ಮುಕ್ತಶಾಲೆ (open school)

೨. ಜನ ಶಿಕ್ಷಣ ಸಂಸ್ಥೆ ಬೆಂಗಳೂರು.

೩. ಕೃಷಿ ವಿಜ್ಞಾನ ಕೇಂದ್ರ, ಸುತ್ತೂರು.

೪. Rudset

೫. ಜನಶಿಕ್ಷಣ ಸಂಸ್ಥೆ ಮೈಸೂರು.

೬. Rural Development and Self employment Training Institute, Chamarajanagar

***ಸ್ನಾತಕೋತ್ತರ ಪದವಿ ಕಾಲೇಜುಗಳು – ೦೪**

೧. ಊಟಿರಸ್ತೆ ಮೈಸೂರು J.S.S ಸ್ನಾತಕೋತ್ತರ

೨. ನಂಜನಗೂಡು J.S.S ಸ್ನಾತಕೋತ್ತರ

೩. ಚಾಮರಾಜನಗರ J.S.S ಸ್ನಾತಕೋತ್ತರ

೪. ಕೊಳ್ಳೇಗಾಲ J.S.S ಸ್ನಾತಕೋತ್ತರ

**ಶೈಕ್ಷಣೀಕವಾಗಿ ದೇವನೂರು ಗುರುಮಲ್ಲೇಶ್ವರ ದಾಸೋಹ ಮಠ:**

ಮೈಸೂರು ಜಿಲ್ಲೆಯಲ್ಲಿ ಶೈಕ್ಷಣೀಕ ರಂಗಕ್ಕೆ ಹೆಚ್ಚು ಒತ್ತುಕೊಟ್ಟ ಶಿಕ್ಷಣ ಸಂಸ್ಥೆಗಳಲ್ಲಿ ದೇವನೂರು ಗುರುಮಲ್ಲೇಶ್ವರ ದಾಸೋಹ ಮಠದ ಕಾಣಿಕ ಕೂಡ ಮಹತ್ವದ್ದು. 'ನಿರಕ್ಷರತೆ' ಎನ್ನುವುದು ಭಾರತದ ಒಂದು ಪ್ರಮುಖ ಸಮಸ್ಯೆಯಾಗಿದೆ. ಭಾರತದ ಮಾಜಿ ಉಪರಾಷ್ಟ್ರಪತಿಗಳಾಗಿದ್ದ ಡಾ.ಜಾಕೀರ್ ಹುಸೇನ್‌ರವರು ಪ್ರತಿ ಅನಕ್ಷರಸ್ತ ಮಾನವನ ಜೀವನ ಒಂದು ದುರಂತ ಎಂದಿದ್ದಾರೆ. ಈ ಮಾತು ನಿಜಕ್ಕೂ ವಾಸ್ತವತೆಗೆ ಹತ್ತಿರವಾಗಿದೆ ಎನ್ನಬಹುದು. ಅಕ್ಷರ ಜ್ಞಾನಿಯಾದ ವ್ಯಕ್ತಿ ತನ್ನ ಬದುಕನ್ನು ಸಾರ್ಥಕಗೊಳಿಸಿಕೊಳ್ಳುವುದರ ಜೊತೆಗೆ, ಸುತ್ತ ಮುತ್ತಲಿನ ಸಮಾಜದಲ್ಲಿ ಅವನೊಬ್ಬ ಉಪಯುಕ್ತ ಜೀವಿಯಾಗುತ್ತಾನೆ. ಆದುದರಿಂದ ಸಾಕ್ಷರತೆ, ಶಕ್ತಿಯ 'ಕೈ'

ಎನ್ನಬಹುದು. ಮಾನವ ಜನಾಂಗದ ಸರ್ವತೋಮುಖ ಬೆಳವಣಿಗೆಗೆ 'ಅನ್ನದಾನ' ವಿದ್ಯಾದಾನ, ಬಹು ಮುಖವಾದುವು ಇದನ್ನರಿತು ಈ ಮಠದ ಲಿಂಗೈಕ್ಯರಾದ ಪೂಜ್ಯ ಶ್ರೀತೋಂಟದಾರ್ಯಸ್ವಾಮಿಗಳವರ ಕಾಲದಲ್ಲಿಯೇ ದೇವನೂರಿನಲ್ಲಿ ಒಂದುಉಚಿತ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ ಅನೇಕ ಜ್ಞಾನಾರ್ಥಿಗಳಿಗೆ ಅಶನ-ವಸನ ವ್ಯವಸ್ಥೆಗಳನ್ನು ಮಾಡಲು ಪ್ರಾರಂಭಿಸಿತು. ನಂತರ ಅನಕ್ಷರತೆ ಮತ್ತು ಬಡತನದಂತಹ ಸಮಸ್ಯೆಗಳನ್ನು ಹೋಗಾಲಾಡಿಸಲು ಶ್ರೀಮಠದ ಇಂದಿನ ಮಠಾಧ್ಯಕ್ಷರಾದ ಶ್ರೀ.ನಿ.ಪ್ರ.ಸ್ವ.ಶ್ರೀ ಮಹಾಂತಸ್ವಾಮಿಗಳವರು ೧೯೭೧ರಲ್ಲಿ ಶ್ರೀ ಗುರುಮಲ್ಲೇಶ್ವರ ವಿದ್ಯಾಸಂಸ್ಥೆ(ರಿ)ಯನ್ನು ಸ್ಥಾಪಿಸಿ ಹಲವಾರು ಶಾಲೆ ಕಾಲೇಜು ಮತ್ತು ವಿದ್ಯಾರ್ಥಿನಿಲಯಗಳನ್ನು ತೆರಿದಿದ್ದಾರೆ. ಇವುಗಳಲ್ಲಿ ಸಹಸ್ರಾರು ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಉನ್ನತಿ ಪಡೆದಿದ್ದಾರೆ, ಪಡೆಯುತ್ತಿದ್ದಾರೆ 'ಶ್ರೀಮಠದ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ವಿದ್ಯಾಸಂಸ್ಥೆಗಳನ್ನೂ ಈ ಕೆಳಕಂಡಂತೆ ಗುರುತಿಸಬಹುದು.

೧. ಶ್ರೀಗುರುಮಲ್ಲೇಶ್ವರು ಉಚಿತ ವಿದ್ಯಾರ್ಥಿನಿಲಯ ದೇವನೂರು ನಂಜನಗೂಡು ತಾಲ್ಲೂಕು- ೧೯೫೪-೫೫

೨. ಶ್ರೀಗುರುಮಲ್ಲೇಶ್ವರ ಸಂಸ್ಕೃತ, ವೇದ, ಆಗಮ ಜ್ಯೋತಿಷ ಪಾಠಶಾಲೆ ನಂಜನಗೂಡು ತಾಲ್ಲೂಕು ೧೯೮೦-೮೧

೩. ಶ್ರೀಗುರುಮಲ್ಲೇಶ್ವರ ವೀರಶೈವ ವಿದ್ಯಾರ್ಥಿ ನಿಲಯ ಕೊಳ್ಳೇಗಾಲ ೧೯೭೮-೭೯

೪. ಶ್ರೀಗುರುಮಲ್ಲೇಶ್ವರ ಪಾಲಿಟೆಕ್ನಿಕ್ ಕಾಲೇಜು , ದೇವನೂರು ೧೯೮೮-೮೯

೫. ಶ್ರೀಗುರುಮಲ್ಲೇಶ್ವರ ಸಾರ್ವಜನಿಕ ವಿದ್ಯಾರ್ಥಿನಿಲಯ ಹರವೆ. ಚಾ.ನಗರತಾಲ್ಲೂಕು ೧೯೮೮-೮೯

೬. ಶ್ರೀಗುರುಮಲ್ಲೇಶ್ವರ ಬಾಲಕಿಯರ ಪ್ರೌಢಶಾಲೆ ಹರವೆ ಚಾ.ನಗರ ತಾಲ್ಲೂಕು ೧೯೯೦-೯೧

೭. ಶ್ರೀಗುರುಮಲ್ಲೇಶ್ವರ ಸಂಯುಕ್ತ ಪದವಿಪೂರ್ವಕಾಲೇಜು ಹಗಿನವಾಳು ನಂಜನಗೂಡು ತಾಲ್ಲೂಕು. ೧೯೯೦-೯೧

೮. ಶ್ರೀಗುರುಮಲ್ಲೇಶ್ವರ ಪ್ರೌಢಶಾಲೆ ಬೋಗಯ್ಯನಹುಂಡಿ ಗುಂಡ್ಲುಪೇಟೆ ತಾಲ್ಲೂಕು- ೧೯೯೧-೯೨

೯. ಶ್ರೀಗುರುಮಲ್ಲೇಶ್ವರ ಬಾಲಕಿಯರಪ್ರೌಢಶಾಲೆತಗಡೂರು.ನಂಜನಗೂಡು ತಾಲ್ಲೂಕು೧೯೯೧-೯೨

೧೦. ಶ್ರೀಗುರುಮಲ್ಲೇಶ್ವರ ಬಾಲಕಿಯರ ಪ್ರೌಢಶಾಲೆ ನಂಜನಗೂಡು ೧೯೯೧-೯೨

೧೧. ಶ್ರೀಗುರುಮಲ್ಲೇಶ್ವರ ಪ್ರೌಢಶಾಲೆ ದೂರಗ್ರಾಮ ಮೈಸೂರು ತಾಲ್ಲೂಕು- ೧೯೯೧-೯೨

೧೨. ಶ್ರೀಗುರುಮಲ್ಲೇಶ್ವರ ಪ್ರೌಢಶಾಲೆ ಎಸ್.ಹೊಸಕೋಟೆ ನಂಜನಗೂಡ ತಾಲ್ಲೂಕು- ೧೯೯೧-೯೨

೧೩. ಶ್ರೀಗುರುಮಲ್ಲೇಶ್ವರ ಪ್ರೌಢಶಾಲೆ ಅಡಗೂಡು ಕೆ.ಆರ್.ನಗರ ತಾಲ್ಲೂಕು – ೧೯೯೧-೯೨

೧೪. ಶ್ರೀಗುರುಮಲ್ಲೇಶ್ವರವಿದ್ಯಾರ್ಥಿನಿಲಯ ಎಸ್.ಹೊಸಕೋಟೆ ನಂಜನಗೂಡುತಾಲ್ಲೂಕು ೧೯೯೧-೯೨

೧೫. ಶ್ರೀಗುರುಮಲ್ಲೇಶ್ವರ ಬಾಲಕಿಯರ ಪ್ರೌಢಶಾಲೆ ಹಲ್ಲರೆ ನಂಜನಗೂಡು ತಾಲ್ಲೂಕು-೧೯೯೪-೯೫

೧೬. ಶ್ರೀಗುರುಮಲ್ಲೇಶ್ವರ ಪ್ರೌಢಶಾಲೆ ಕಾರ್ಯಗ್ರಾಮ ನಂಜನಗೂಡು ತಾಲ್ಲೂಕು-೧೯೯೨-೯೩

೧೭. ಶ್ರೀಗುರುಮಲ್ಲೇಶ್ವರ ಕೈಗಾರಿಕ ತರಬೇತಿ ಸಂಸ್ಥೆ ದೇವನೂರು.

ಹೀಗೆ ಇನ್ನು ಹತ್ತು ಹಲವಾರು ವಿಭಾಗದಲ್ಲಿ ಶಿಕ್ಷಣಕೇಂದ್ರಗಳನ್ನು ತೆರೆದು ಬಡ ವಿದ್ಯಾರ್ಥಿಗ`ಳಿಗೆ ಜ್ಞಾನಾನ್ನ ದಾಸೋಹ ನೀಡಬೇಕೆಂಬ ಆಸೆ ಈಗಿನ ಶ್ರೀಗಳಲ್ಲಿ ಅಚಲವಾಗಿದೆ.

ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಪಿರಿಯಾಪಟ್ಟಣ ತಾಲ್ಲೂಕಿನ **ಬೆಟ್ಟದಪುರದ ಶ್ರೀಮಠವು** ಸಹ ತುಂಬಾ ವರ್ಷಗಳಿಂದ ಸಮಾಜದ ಅನೇಕ ಶಿಕ್ಷಣ ವಂಚಿತ ವಿದ್ಯಾರ್ಥಿಗಳಿಗೆ ಜ್ಞಾನ ದಾಸೋಹ ನೀಡುತ್ತ ಎಲೆಮರೆಯ ಕಾಯಂತೆ ಸಮಾಜಿಕ ಮತ್ತು ಶೈಕ್ಷಣಿಕ ವಲಯದಲ್ಲಿ ಧಾರ್ಮಿಕತೆನ್ನು ಮೈಗೂಡಿಸಿಕೊಂಡು ಸ್ವಸ್ತನಾಗರಿಕ ಸಮಾಜದ ಬೆಳವಣಿಗೆಗೆ ಸಹಕಾರಿಯಾಗಿದೆ. ಮೂಲತಃ ಶ್ರೀ ಬೆಟ್ಟದಪುರದಮಠದ ವಿರಕ್ತಮಠ. ಈ ವಿರಕ್ತಮಠಕ್ಕೆ "ಶ್ರೀ ಚಿಕ್ಕ ವೀರದೇಶಿಕೇಂದ್ರಸ್ವಾಮಿಮಠ" ಎಂದು "ಲೀಲಾಖ್ಯ ವಿರಕ್ತಮಠ" ಎಂದು ರೂಢಿಗತವಾಗಿ ಕರೆಯಲ್ಪಟ್ಟಿದೆ. ಜ್ಞಾನ ಮತ್ತು ಪವಾಡ ಪುರುಷರಾದ ಚಿಕ್ಕವೀರದೇಶಿಕೇಂದ್ರ ಸ್ವಾಮಿಗಳು ಆಗಿನ ಕಾಲದಲ್ಲೆ 'ನಹಿಜ್ಞಾನೇನ ಸದೃಶ್ಯಂ' ಎಂಬಂತೆ ಜ್ಞಾನಕ್ಕೆ ಮೊದಲ ಬೆಳಕಾಗಿದ್ದವರು. ಮೈಸೂರುಅರಸರಾದ ಶ್ರೀಕೃಷ್ಣರಾಜೇಂದ್ರರ ಭಿನ್ನಹಮನ್ನಿಸಿ ಮೈಸೂರಿನಲ್ಲಿ ಮೊದಲಿಗೆ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. ಇವರ ಕರಕಮಲ ಸಂಜಾತರಾದ ಶ್ರೀ ಚನ್ನವೀರದೇಶಿಕೇಂದ್ರಸ್ವಾಮಿ ಬಾಲ್ಯದಿಂದಲೆ ವೀರಶೈವಧರ್ಮದ ಅಷ್ಟಾವರಣ ಮತ್ತು ಷಟ್‌ಸ್ಥಲ ಆಚರಣೆಯಿಂದ ಸದಾಚಾರ ಸಂಪನ್ನರಾಗಿದ್ದ ಶ್ರೀಗಳು ಕಾಯಕದಲ್ಲಿ ಅನ್ನದಾಸೋಹ, ಜ್ಞಾನ ದಾಸೋಹ ಮತ್ತು ಅಕ್ಷರದಾಸೋಹ ಎಂಬ ಈ ತ್ರಿವಿಧ ದಾಸೋಹಕ್ಕೆ ಹೆಚ್ಚಿನ ಒತ್ತು ಕೊಟ್ಟರು. ಇದರ ಫಲವಾಗಿ ಶ್ರೀ ಚಿಕ್ಕ ವೀರದೇಶಿಕೇಂದ್ರ ಸ್ವಾಮಿಗಳು ಮೈಸೂರಿನಲ್ಲಿ ಆರಂಭಿಸಿದ ವಿದ್ಯಾರ್ಥಿನಿಲಯಕ್ಕೆ 'ಶ್ರೀ ಚಿಕ್ಕವೀರಗುರುಪ್ರಸಾದನಿಲಯ' ಎಂದು ನಾಮಕರಣ ಮಾಡಿ ಹೆಚ್ಚೆಚ್ಚು ವಿದ್ಯಾರ್ಥಿಗಳು ಬಂದು ನೆಲೆಸಲು ಅವಕಾಶ ಮಾಡಿ ಕೊಟ್ಟರು. ಈ ಗುರುಗಳ ನಂತರ ಬಂದ ಪ್ರಸ್ತುತ ಇರುವ ಶ್ರೀ ಚನ್ನಬಸವದೇಶಿಕೇಂದ್ರ ಸ್ವಾಮಿಗಳು ಬಾಲ್ಯದಿಂದಲೂ ಸಾಹಿತ್ಯ,ಧರ್ಮ ಮತ್ತು ಕೃಷಿಯ ಬಗ್ಗೆ ಅಪಾರ ಒಲವನ್ನು ಹೊಂದಿದವರು. ಈ ಶ್ರೀಗಳು ಮಠಾಧಿಪತಿಗಳಾದ ಮೇಲೆ ಶ್ರೀಮಠದ ಏಳಿಗೆಗೆ ಸರ್ವ ರೀತಿಯಲ್ಲೂ ತನುಮನಗಳನ್ನು ಅರ್ಪಿಸಿ ಸಮಾಜದಲ್ಲಿರುವ ಜನತೆಗೆ

ತ್ರಿವಿಧ ದಾಸೋಹ ನೀಡಲು ಮುಂದಾಗಿದ್ದಾರೆ. ಹಿರಿಯ ಗುರುಗಳು ಹಾಕಿಕೊಟ್ಟ ಮಾರ್ಗದರ್ಶನದ ಮೇರೆಗೆ ಇಂದು ಮಠ ಧಾರ್ಮಿಕ, ಸಾಮಾಜಿಕವಲ್ಲದೆ ಶೈಕ್ಷಣಿಕವಾಗಿ ಮುಂದುವರಿದಿರುವುದನ್ನು ನಾವು ಗಮನಿಸಬಹುದು.

ಮೈಸೂರಿನಲ್ಲಿದ್ದ ಶ್ರೀಮಠದ ಚಿಕ್ಕವೀರಗುರುಪ್ರಸಾದನಿಲಯದ ಪಕ್ಕದಲ್ಲಿ ನರ್ಸಿಂಗ್‌ಶಾಲಾ ಕಾಲೇಜು ಆರಂಭಿಸಿದ್ದಾರೆ. ಆ ಮೂಲಕ ಪ್ರಾಥಮಿಕ ಆರೋಗ್ಯಕ್ಕೆ ಹೆಚ್ಚು ಒತ್ತುಕೊಟ್ಟ ಕೀರ್ತಿ ಶ್ರೀಗಳಿಗೆ ಸಲ್ಲುತ್ತದೆ. ಶ್ರೀಮಠದ ಆವರಣದಲ್ಲಿ ವಿದ್ಯಾರ್ಥಿ ನಿಲಯ ಸ್ಥಾಪಿಸಿ ಬಡಮಕ್ಕಳಿಗೆ ವಿದ್ಯಾಶ್ರಯ ನೀಡಿ ಕೃಷಿ ಚಟುವಟಿಕೆಯ ಬಗ್ಗೆ ವೈಜ್ಞಾನಿಕ ಅರಿವನ್ನು ಮೂಡಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಅಲ್ಲದೆ ಅರಕಲಗೂಡು ತಾಲ್ಲೂಕಿನ ಬಸವಪಟ್ಟಣದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಆರಂಭಿಸಿದ್ದಾರೆ ಜೊತೆಗೆ ಪಿರಿಯಾಪಟ್ಟಣದಲ್ಲಿ ಒಂದು ಪ್ರೌಢಶಾಲೆ ಶ್ರೀ ಮಠದ ಆವರಣದಲ್ಲಿ ಪ್ರೌಢಶಾಲೆಗಳನ್ನು ತೆರೆಯುದರ ಮೂಲಕ ಬಡ ಮತ್ತು ಗ್ರಾಮೀಣ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶ್ರೀಗಳು ಇನ್ನೂ ಅಣೇಕ ಶೈಕ್ಷಣಿಕ ಕಾರ್ಯಕ್ರಮ ರೂಪಿಸುತ್ತಿದ್ದಾರೆ.

೧೯೭೨ರಲ್ಲಿ ಪ್ರಾರಂಭವಾದ ಶ್ರೀ ರಂಬಾಪುರಿ ಶಾಖಾಮಠವೇ **ಕರ್ಪೂರವಳ್ಳಿ ಜಂಗಮ ಮಠ** ಇದರ ಮೊದಲ ಪೀಠಾಧಿಪತಿಗಳೇ ಈಗಿನ ಶ್ರೀ ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು ಪೀಠಾಧಿಪತಿಗಳಾದಗಿನಿಂದ ಸಮಾಜದ ಏಳಿಗೆಗೆ ಕಂಕಣ ಬದ್ಧರಾಗಿ ಸಮಾಜದ ಶರಣಬಂಧುಗಳಿಗೆ ಏನಾದರೂ ಒಳ್ಳೆಯ ಕಾರ್ಯ ಮಾಡಬೇಕು ಎಂದು, **'ವೃತ್ತಿಶ್ಚೈತನ್ಯ ರೂಪಿಣಿ'** ಎಂಬಂತೆ ಕಾಯಕದಿಂದಲೆ ಬದುಕು ಎಂಬ ಹಿರಿಯರ ಮಾತಿನಂತೆ, ಈ ಸುತ್ತಲಿನ ಸಮಾಜದ ಸರ್ವತೋಮುಖ ಏಳಿಗೆಗೆ ಬದ್ಧರಾಗಿ ಅನೇಕ ಕಷ್ಟ ಕರ್ಪಾಣ್ಯಗಳು ಎದುರಾದರೂ ಧೃತಿಗೆಡದೆ ಬಡತನದಲ್ಲೆ ಬೆಳೆದ ಶ್ರೀಗಳು ಬಡಜನರ ಮಕ್ಕಳ ಕಲ್ಯಾಣಕ್ಕಾಗಿ ವಿದ್ಯಾಭ್ಯಾಸಕ್ಕಾಗಿ ಕ್ರಿ.ಶ ೧೯೯೦ರಲ್ಲಿ ಜಗದ್ಗುರು ರೇಣುಕಾಚಾರ್ಯ ವಿದ್ಯಾಪೀಠವನ್ನು ಸ್ಥಾಪಿಸಿದರು. ನಂತರ ಈ ಮೂಲಕ ಉಚಿತ ವಿದ್ಯಾದಾನವನ್ನು ಪ್ರಾರಂಭಿಸಿದರು. ನಂತರ ಇದಕ್ಕೆ ಅಗತ್ಯವಾದ ಕಟ್ಟಡವನ್ನು ಐದು ಲಕ್ಷ ರೂ ವೆಚ್ಚದಲ್ಲಿ ನಿರ್ಮಿಸಿದರು. ಅಲ್ಲದೆ ಪ್ರತಿ ತಿಂಗಳು ಅಮಾವಾಸ್ಯೆ ಮತ್ತು ಪೌರ್ಣಮಿಯ ದಿನಗಳಂದು ಶ್ರೀಮಠದಲ್ಲಿ ಶಿವತತ್ವ ಚಿಂತನ ಗೋಷ್ಠಿ ನಡೆಸಿ ಸಮಾಜದ ಧಾರ್ಮಿಕ, ಬೌದ್ಧಿಕ ಮತ್ತು ಮಾನಸಿಕ ಬೆಳವಣಿಗೆಗೆ ಕಾರಣರಾಗಿದ್ದಾರೆ. 'ಪರೋಪಕಾರಾರ್ಥಮಿದಂ ಶರೀರಂ' ಎಂಬಂತೆ ಹಳ್ಳಿಯಲ್ಲಿ ಶಾಲೆಯನ್ನು ತೆರೆಯಲು ಸರ್ಕಾರಕ್ಕೆ ಸ್ಥಳದ ಅಭಾವ ಉಂಟಾದಾಗ ಆ ಶಾಲೆಗೆ ಅಗತ್ಯವಾದ ಜಮೀನನ್ನು ಉಚಿತವಾಗಿ ನೀಡಿದರು. ಅಲ್ಲದೆ "ಅನಾಥೋ ದೈವ ರಕ್ಷಕಃ" ಎಂಬುದನ್ನು ಮನಗಂಡ ಶ್ರೀಗಳು ತಂದೆ-ತಾಯಿ ಅಥವಾ ಇನ್ನಾವುದೇ ರೀತಿ ಪಾಲಕರ

ಪೋಷಣೆಯಿಂದ ವಂಚಿತರಾದ ಅನಾಥ ಮಕ್ಕಳಿಗಾಗಿ 'ಶ್ರೀ ಜಗದ್ಗುರು ರೇಣುಕಾಚಾರ್ಯ ನಿರ್ಗತಿಕ ಮಕ್ಕಳ ಕುಟೀರ'ವನ್ನು ಉಚಿತವಾಗಿ ಆರಂಭಿಸಿದ ಕೀರ್ತಿ ಶ್ರೀಗಳಿಗೆ ಸಲ್ಲುತ್ತದೆ. ಮನುಷ್ಯ ಸನ್ಮಾರ್ಗದಲ್ಲಿ ಸಾಗಲು ಜೀವನ ನಿರ್ವಹಿಸಲು, ಸಫಲವಾಗಲು, ಧರ್ಮಾಚಾರಣೆಯೊಂದಿಗೆ ವಿದ್ಯೆ ಹಾಗೂ ಉಸಿರೆತ್ತಿ ಬಾಳಲು ಅನ್ನ ಬೇಕೆಂದು, ವಿದ್ಯೆ, ಅನ್ನ ವಸ್ತ್ರ, ವಸತಿ ಎಲ್ಲದನ್ನು ಉಚಿತವಾಗಿ ನೀಡುತ್ತ ಕಾಯಕ ನಿರ್ವಹಿಸುತ್ತಿದ್ದಾರೆ.

ಶ್ರೀ ಮಠದ ಪಕ್ಕದಲ್ಲಿ ಹಿರಿಯ ಪ್ರಾಥಮಿಕ ಶಾಲೆ ಆರಂಭಿಸಿದ್ದಾರೆ ಯಾವುದೇ ನೆರವು ಇಲ್ಲದೆ ಸುಮಾರು ೪೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತ ಶ್ರೀಮಠಕ್ಕೆ ಭೇಟಿ ನೀಡುವ ಭಕ್ತರಿಗೆ ಜ್ಞಾನಾನ್ನ ನೀಡುತ್ತ ಮುಂದೆ ವೃತ್ತಿ ಮತ್ತು ಆಧ್ಯಾತ್ಮಿಕ ಶಿಕ್ಷಣ ನೀಡುವ ಹಂಬಲ ಉಳ್ಳವರಾಗಿ ಸಮಾಜಮುಖಿಯಾಗಿ ಜೀವನ ನಡೆಸುತ್ತಿದ್ದಾರೆ.

ಮೈಸೂರು ಜಿಲ್ಲೆಯ ಹೃದಯ ಭಾಗದಲ್ಲಿರುವ ಮತ್ತೊಂದು ಪ್ರಸಿದ್ಧ ಮಠ **ಶ್ರೀಹೊಸಮಠ,** ಶ್ರೀಮಠವು ಶಿಕ್ಷಣವಲಯಕ್ಕೆ ನೀಡಿರುವ ನೀಡುತ್ತಿರುವ ಕೊಡುಗೆ ಅವಿಸ್ಮರಣಿಯ 'ಶ್ರೀನಟರಾಜ ಪ್ರತಿಷ್ಠಾನ'ದ ಮೂಲಕ ಧಾರ್ಮಿಕ-ಸಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ತನ್ನ ಅಪರಿಮಿತವಾದ ಕಾರ್ಯವನ್ನು ನಿರ್ವಹಿಸುತ್ತದೆ. ಮೈಸೂರುಜಿಲ್ಲೆಯ ವೀರಶೈವಮಠಗಳಲ್ಲಿ ಇದು ಕೂಡ ಪ್ರಮುಖ ಸ್ಥಾನದಲ್ಲಿದ್ದು ಶಿಕ್ಷಣ ರಂಗದಲ್ಲಿ ಅದರಲ್ಲಿಯೂ ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಹಿಳಾ ಸಬಲೀಕರಣದ ಹೆಜ್ಜೆಯಾಗಿ ಮುಂದುವರಿಯುತ್ತಿದೆ.

"ಶ್ರೀಹೊಸಮಠದ ಗುರು ಪರಂಪರೆಯ ಹತ್ತೊಂಬತ್ತನೆಯವಾರದ ಪೂಜ್ಯ ಶ್ರೀ ಗುರುಶಾಂತ ಸ್ವಾಮಿಗಳು (೧೯೨೯-೧೯೯೫) ಸಂಸ್ಕೃತದಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದರು. ದೊಡ್ಡ ವಿದ್ವಾಂಸರಾಗಿದ್ದ ಶ್ರೀಗಳು ಶ್ರೀಮನ್ಮರಾಜರವರ ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣ ಪ್ರಾಧ್ಯಾಪಕರಾಗಿದ್ದು, ತಮ್ಮ ನಿವೃತ್ತಿಯ ನಂತರ ಶ್ರೀಮಠದ ಹಳೆಯ ಕಟ್ಟಡವನ್ನು ಕೆಡವಿ ನೂತನವಾಗಿ ಮಠವನ್ನು ಕಟ್ಟಿಸಿದರು ಅಷ್ಟಲ್ಲದೆ ಶ್ರೀಮಠಕ್ಕೆ ಹೊಂದಿಕೊಡಂತೆ ಇದ್ದ ಸ್ವಲ್ಪ ಭಾಗದಲ್ಲಿ ಗ್ರಾಮಾಂತರ ಪ್ರದೇಶದಿಂದ ನಗರಕ್ಕೆ ಬಂದು ವಿದ್ಯಾಭ್ಯಾಸ ಮುಂದುವರಿಸಲು ಬಯಸುವ ವಿದ್ಯಾರ್ಥಿಗಳಿಗೆ ಅನುಕೂಲವಾಲೆಂದು ೧೯೬೨ರಲ್ಲಿ ವಿದ್ಯಾರ್ಥಿನಿಲಯ (ಶ್ರೀನಟರಾಜ ಹಾಸ್ಟಲ್)ವನ್ನು ಆರಂಭಿಸಿದರು. ಪರಮ ಪೂಜ್ಯರು ೧೯೯೫ರಲ್ಲಿ ಲಿಂಗೈಕ್ಯರಾದ ಮೇಲೆ ಅವರ ಕನಸುಗಳಲ್ಲವನ್ನು ಸಕಾರಗೊಳಿಸುವ ನಿಟ್ಟಿನಲ್ಲಿ ಸಂಕಲ್ಪ ಹೊತ್ತ ಪ್ರಸ್ತುತ ಶ್ರೀಗಳಾದ ಶ್ರೀ ಚಿದಾನಂದ ಸ್ವಾಮಿಗಳು ತಮ್ಮ ಹಿರಿಯ ಗುರುಗಳು ಆರಂಭಿಸಿದ ಸಂಸ್ಥೆಗಳಿಗೆ ಇಟ್ಟಿದ್ದ ಮೂಲನಾಮವನ್ನು ಬಿಟ್ಟುಕೊಡಲು ಇಚ್ಛಿಸದೆ ೧೯೮೪ರಲ್ಲಿ 'ಶ್ರೀನಟರಾಜ ಪ್ರತಿಷ್ಠಾನ'ವೆಂಬ ಪ್ರತಿಷ್ಠಾನ (Establishment)

ವನ್ನು ಅಸ್ತಿತ್ವಕ್ಕೆ ತಂದು ಅದರ ಆಶ್ರಯದಲ್ಲಿ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಸಂಸ್ಥೆಗಳನ್ನು ಕಾಲಾನುಕ್ರಮದಲ್ಲಿ ಆರಂಭಿಸಿತ್ತ ಬಂದು ತಮ್ಮ ಇಚ್ಛಾ, ಜ್ಞಾನ, ಕ್ರಿಯಾ ಶಕ್ತಿಗಳನ್ನೂ ಒಂದುಗೂಡಿಸಿ ಸನ್ನಡೆಯೊಂದಿಗೆ ಶ್ರೀಮಠವನ್ನು ಮುನ್ನಡೆಸುತ್ತಿದ್ದಾರೆ."

ಈ 'ಶ್ರೀ ನಟರಾಜ ಪ್ರತಿಷ್ಠಾನ'ದ ಆಶ್ರಯದಲ್ಲಿ ಇಂದು ಧರ್ಮ ಸಂಸ್ಕೃತಿ ಸಮಾಜ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ೨೦ಕ್ಕೂ ಹೆಚ್ಚು ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಶಿಶುವಿಹಾರಗಳು, ಕಿರಿಯ, ಹಿರಿಯ ಪ್ರಾಥಮಿಕಶಾಲೆ, ಪ್ರೌಢಶಾಲೆಗಳು, ಪಬ್ಲಿಕ್‌ಸ್ಕೂಲ್, ನರ್ಸಿಂಗ್‌ಸ್ಕೂಲ್, ಪದವಿಪೂರ್ವ, ಪದವಿ ಕಾಲೇಜುಗಳು, ಡಿ.ಇಡಿ ಮತ್ತು ಬಿ.ಇಡಿ ಕಾಲೇಜುಗಳು ವಿದ್ಯಾರ್ಥಿನಿಲಯಗಳು ಪ್ರತಿಷ್ಠಾನದ ಅಧೀನದಲ್ಲಿ ಸಕ್ರಿಯವಾಗಿವೆ. ಪೂಜ್ಯಶ್ರೀ ಚಿದಾನಂದಸ್ವಾಮಿಗಳು ಮಹಿಳಾ ವಿದ್ಯಾಭ್ಯಾಸಕ್ಕೆ ನೀಡಿರುವ ಕೊಡುಗೆ ಅಪಾರ, ಅನನ್ಯ, ಈವರೆಗೆ ಮಹಿಳಾ ಸಮುದಾಯವನ್ನೂ ಅಷ್ಟಾಗಿ ಪರಿಗಣಿಸದ ಸಮಾಜವನ್ನು ಒಪ್ಪದ ಅವರು, ಈ ನಿಟ್ಟಿನಲ್ಲಿ ನಗರದ ಮತ್ತು ಗ್ರಾಮಾಂತರ' ಪ್ರದೇಶದ ಬಡ, ಮಧ್ಯಮ ವರ್ಗದ ಹೆಣ್ಣು ಮಕ್ಕಳ ಓದಿಗೆ ಆದ್ಯ ಗಮನ ಹರಿಸಿ ಹೆಚ್ಚು ಮಹಿಳಾ ವಿದ್ಯಾ ಸಂಸ್ಥೆ ವಸತಿ-ನಿಲಯಗಳನ್ನು ತೆರೆದಿರುವುದು ನಟರಾಜ ಪ್ರತಿಷ್ಠಾನದ ವೈಶಿಷ್ಟ್ಯವಾಗಿದೆ.

ಈ ಪ್ರತಿಷ್ಠಾನದ ವಿದ್ಯಾಸಂಸ್ಥೆಗಳಲ್ಲೆ ಹೆಚ್ಚು ವಿದ್ಯಾಸಂಸ್ಥೆಗಳು ಶ್ರೀಮಠಕ್ಕೆ ಹೊಂದಿಕೊಂಡಂತೆ ಮೈಸೂರಿನ ಹೃದಯ ಭಾಗದಲ್ಲಿ ಇವೆ. ಇನ್ನೂ ನಗರದ ವಿವಿಧ ಬಡಾವಣೆಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ತೆರೆಯಲಾಗಿರುವ ಶಿಕ್ಷಣ ಸಂಸ್ಥೆಗಳಲ್ಲಿ ಸಮಾಜದ ಬಡವರು, ಮಧ್ಯಮ ವರ್ಗದವರು ವಿಶೇಷವಾಗಿ ಬಡವರ್ಗದ ಹೆಣ್ಣು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಅನುಕೂಲವಾಗಿರುವಂತೆ ತೆರೆದಿರುವುದು ಶ್ರೀಗಳವರ ಸಾಮಾಜಿಕ ಕಳಕಳಿಗೆ ಹಿಡಿದ ಕನ್ನಡಿಯಾಗಿದೆ. ಶ್ರೀ ಮಠದ ಆವರಣದಲ್ಲಿ ಎಲ್ಲಾ ರೀತಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗಮಾಡುತ್ತರುವ ವಿದ್ಯಾರ್ಥಿನಿಯರುಗಳಿಗೆ ಅನ್ನ-ವಸತಿ ಬಯಸುವ ವಿದ್ಯಾರ್ಥಿಗಳಿಗೆ ಆಯಾ ವಿಭಾಗಕ್ಕನುಗುಣವಾಗಿ ಪ್ರತ್ಯೇಕವಾದ ವಸತಿ ನಿಲಯಗಳನ್ನು ತೆರೆದಿರುವುದು ಕಂಡುಬರುತ್ತದೆ. ಇದರಿಂದ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಓದುಮುಂದುವರಿಸಲು ತುಂಬಾ ಪ್ರಯೋಜನಕಾರಿಯಾಗಿದೆ. ವೈವಿಧ್ಯಮಯವಾದ ಇಲ್ಲಿನ ಶಿಕ್ಷಣ ಸಂಸ್ಥೆಗಳಲ್ಲಿ ಪ್ರತಿವರ್ಷ ಒಟ್ಟು ೩೫೦೦ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವುದು ಕಂಡು ಬರುತ್ತದೆ.

ಪೂಜ್ಯ ಶ್ರೀಗಳ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ ಇಲ್ಲಿನ ವಿವಿಧ ಶಿಕ್ಷಣ-ಶಿಕ್ಷಣೇತರ ಸಂಸ್ಥೆಗಳ ೩೦೦ಕ್ಕೂ ಹೆಚ್ಚು ಬೋಧಕ-ಬೋಧಕೇತರರು ಹಾಗೂ

ಸಿಬ್ಬಂದಿ ವರ್ಗದವರು, ನಿಷ್ಠೆ ಹಾಗೂ ಅರ್ಪಣಾ ಮನೋಭಾವನೆಯಿಂದ ಕರ್ತವ್ಯ ನಿರ್ವಹಿಸುತ್ತಿರುವುದನ್ನು ನಾವು ಗಮನಿಸಬಹುದು.

೨೦೦೯ರಲ್ಲಿ ಅದ್ದೂರಿಯಾಗಿ ರಜತ ಮಹೋತ್ಸವವನ್ನು ಆಚರಿಸಿಕೊಂಡ 'ಶ್ರೀ ನಟರಾಜ ಪ್ರತಿಷ್ಠಾನ' ಇಪ್ಪತ್ತೈದು ವರ್ಷಗಳ ಸೇವೆಯನ್ನು ಯಶಸ್ವಿಯಾಗಿ ಪೂರೈಸಿದ ಕೀರ್ತಿ ಸಲ್ಲುತ್ತದೆ. ಇದಕ್ಕೆ ಅಭಿನಂದನ ಪೂರಕವಾಗಿ ಮಠದ ಭಕ್ತರು, ಅಭಿಮಾನಿಗಳು, ಹಿತೈಷಿಗಳು ಹಾಗೂ ಇನ್ನಿತರ ಇಲ್ಲಿನ ಸಮಸ್ತ ಬೋಧಕ ಬೋಧಕೇತರ ವರ್ಗದವರು ಈ ಪ್ರತಿಷ್ಠಾನದ ರೂವಾರಿಗಳಾದ ಪರಮಪೂಜ್ಯ ಶ್ರೀ ಚಿದಾನಂದ ಸ್ವಾಮಿಗಳು ನಿಜಕ್ಕೂ ಅಭಿನಂದನಾರ್ಹರು. ಆ ಮೂಲಕ ಶ್ರೀಗಳಿಗೆ ಮುಂದೆ ಶಕ್ತಿ ಆಯುರಾರೋಗ್ಯ ಕಲ್ಪಿಸಿ ಇನ್ನು ಹೆಚ್ಚಿನ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಲಿ ಎಂಬುದು ಎಲ್ಲ ಭಕ್ತರ ಆಶಯವಾಗಿದೆ.

ಶ್ರೀ ನಟರಾಜ ಪ್ರತಿಷ್ಠಾನದ ಆಶ್ರಯದಲ್ಲಿ ರೂಪತಾಳಿ ಸಮಾಜ ಸೇವೆಯ ತೊಡಗಿರುವ ಈ ಪ್ರತಿಷ್ಠಾನದ ಶೈಕ್ಷಣಿಕ ಸಂಸ್ಥೆಗಳ ವಿವರಗಳನ್ನು ಈ ಕೆಳಕಂಡಂತೆ ನೋಡಬಹುದು.

೧. ಶ್ರೀನಟರಾಜ ವಿದ್ಯಾರ್ಥಿ ನಿಲಯ, ಮಠದ ಆವರಣ ಮೈಸೂರು, ೧೯೬೨-೬೩

೨. ಶ್ರೀನಟರಾಜ ಪ್ರೌಢಶಾಲೆ ಚಿದರವಳ್ಳಿ ತಿ.ನರಸೀಪುರ ತಾಲ್ಲೂಕು, ೧೯೮೬-೮೭

೩. ಶ್ರೀನಟರಾಜ ಕಾನ್ವೆಂಟ್ ಮಠದ ಆವರಣ ಮೈಸೂರು, ೧೯೯೦-೯೧

೪. ಶ್ರೀನಟರಾಜ ಮಹಿಳಾ ವಸತಿ ಪ್ರಥಮದರ್ಜೆ ಕಾಲೇಜು ಮಠದ ಆವರಣ ಮೈಸೂರು, ೧೯೯೪-೯೫

೫. ಶ್ರೀನಟರಾಜ ಆಂಗ್ಲಮಾಧ್ಯಮ ಪ್ರೌಢಶಾಲೆ ಮಠದ ಆವರಣ ಮೈಸೂರು, ೧೯೯೭-೯೮

೬. ಶ್ರೀನಟರಾಜ ಮಹಿಳಾ ಪದವಿ ಪೂರ್ವ ಕಾಲೇಜು ಮಠದ ಆವರಣ ಮೈಸೂರು, ೧೯೯೭-೯೮

೭. ಶ್ರೀನಟರಾಜ ಕಾನ್ವೆಂಟ್ ಜೆ.ಸಿ.ನಗರ ಮೈಸೂರು, ೧೯೯೮-೯೯

೮. ಶ್ರೀನಟರಾಜ ಪಬ್ಲಿಕ್ ಸ್ಕೂಲ್ ಮಠದ ಆವರಣ ಮೈಸೂರು, ೨೦೦೦-೦೧

೯. ಶ್ರೀನಟರಾಜ ಕಾನ್ವೆಂಟ್ ನಾಗವಾಲ ಮೈಸೂರು ತಾಲ್ಲೂಕು, ೨೦೦೨-೦೩

೧೦. ಶ್ರೀನಟರಾಜ ಸ್ಕೂಲ್ ಆಫ್ ನರ್ಸಿಂಗ್ ಮಠದ ಆವರಣ ಮೈಸೂರು, ೨೦೦೪-೦೫

೧೧. ಶ್ರೀನಟರಾಜ ಗೌರಿಶಂಕರ ಪ್ರೌಢಶಾಲೆ ಗೌರಿಶಂಕರನಗರ ಮೈಸೂರು, ೨೦೦೪ -೦೫

೧೨. ವಾತ್ಸಲ್ಯ ಡಿ.ಇಡಿ ಕಾಲೇಜು ಶ್ರೀಮಠದ ಆವರಣ ಮೈಸೂರು, ೨೦೦೭-೦೮

೧೩. ವಾತ್ಸಲ್ಯ ಬಿ.ಇಡಿ ಕಾಲೇಜು ಶ್ರೀಮಠದ ಆವರಣ ಮೈಸೂರು, ೨೦೦೬-೦೭

೧೪. ಶ್ರೀನಟರಾಜ ಕಾನ್ವೆಂಟ್ ಚಿದರವಳ್ಳಿ ತಿ.ನರಸೀಪುರ ತಾಲ್ಲೂಕು, ೨೦೦೯-೧೦

೧೫. ಶ್ರೀನಟರಾಜ ಮಹಿಳಾ ಕಾಲೇಜು ವಿದ್ಯಾರ್ಥಿ ನಿಲಯ ಶ್ರೀಮಠದ ಆವರಣ ಮೈಸೂರು.

೧೬. ಶ್ರೀನಟರಾಜ ಉದ್ಯೋಗಸ್ಥ ಮಹಿಳಾ ವಸತಿ ನಿಲಯ ಶ್ರೀಮಠದ ಆವರಣ ಮೈಸೂರು ೧೯೯೪-೯೫

೧೭. ಶ್ರೀನಟರಾಜ ನರ್ಸಿಂಗ್ ಮಹಿಳಾ ವಸತಿ ನಿಲಯ ಶ್ರೀಮಠದ ಆವರಣ ಮೈಸೂರು.

೧೮. ವಾತ್ಸಲ್ಯ ಮಹಿಳಾ ಬಿ.ಇಡಿ ವಸತಿ ನಿಲಯ ಶ್ರೀಮಠದ ಆವರಣ ಮೈಸೂರು.

೧೯. ಶ್ರೀನಟರಾಜ ಸಭಾ ಮಂದಿರ ಶ್ರೀಮಠದ ಆವರಣ ಮೈಸೂರು.

೨೦. ಶ್ರೀನಟರಾಜ ವೃದ್ಧಾಶ್ರಮ ನಾಗವಾಲ ಮೈಸೂರು ತಾಲ್ಲೂಕು.

ಹೀಗೆ 'ಶ್ರೀನಟರಾಜ ಪ್ರಾತಿಷ್ಠಾನ' ಮೂಲಕ ಶ್ರೀ ಹೊಸಮಠವು ಶೈಕ್ಷಣಿಕ ರಂಗದಲ್ಲಿ ಉತ್ತಕ್ಕೆ ಬೆಳೆಯುತ್ತಿದೆ. ಇದಕ್ಕೆ ಅನುರೂಪವಾಗಿ ಶ್ರೀಗಳು ಹೊಸ ಹೊಸ ಕಾರ್ಯ ಯೋಜನೆ ರೂಪಿಸುತ್ತ ಸಮಾಜದ ಏಳಿಗೆಗೆ ಸದಾ ಸಿದ್ದರಾಗಿ ಜ್ಞಾನಾನ್ನ ದಾಸೋಹ ನಡೆಸಿತ್ತಿದ್ದಾರೆ.

ಮೈಸೂರುಜಿಲ್ಲೆಯ ಗಡಿಭಾಗದಲ್ಲಿ ಮಂಡ್ಯಜಿಲ್ಲೆಗೆ ಹತ್ತಿರವಾಗಿರುವ ಬಾಳೆಹೊನ್ನೂರು ಶಾಖಾಮಠವಾಗಿರುವ **'ಶ್ರೀ ಮೇದಿನಿಮಠ'**ವು ಸಹ ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನದೇ ಆದಂತಹ ಅಳಿಲು ಸೇವೆಯನ್ನು ಸಲ್ಲಿಸುತ್ತಿದೆ. ಶ್ರೀಮಠದ ಪೀಠಾಧ್ಯಕ್ಷರಾದ ಶ್ರೀಶಿವಲಿಂಗ ಶಿವಾಚಾರ್ಯ ಸ್ವಾಮಿಗಳು ತಮ್ಮ ೧೬ನೇ ವಯಸ್ಸಿನಲ್ಲಿ ಮಠದಪೀಠಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಮಠದ ಏಳಿಗೆಗೆ ತನುಮನಗಳನ್ನು ಅರ್ಪಿಸಿದ್ದಾರೆ. ನಂತರದ ದಿನಗಳಲ್ಲಿ ಹೆಚ್ಚಿನ ವ್ಯಾಸಂಗಕ್ಕೆಂದು ತುಮಕೂರಿನ ಸಿದ್ದ ಗಂಗೆಗೆ ತೆರಳಿ ನಾಡಿನ ಹಿರಿಯ ಚೇತನ ಡಾ.ಶಿವಕುಮಾರ ಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ಸಂಸ್ಕಾರಪಡೆದು ಸಾತ್ವಿಕ ಗುರುಗಳಾಗಿ ರೂಪುಗೊಂಡರು. ಸಂಸ್ಕೃತ ಅಧ್ಯಯನ ಮಾಡಿ ಸಿದ್ದಗಂಗೆಯ ಸಂಸ್ಕೃತ ಪಾಠ ಶಾಲೆಯಲ್ಲಿಯೇ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಪ್ರವೃತ್ತಿಯಲ್ಲಿ ಪ್ರಾಧ್ಯಾಪಕರಾದರೂ ವೃತ್ತಿಯಲ್ಲಿ ಮೇದಿನ ಮಠದ ಪೀಠಾಧ್ಯಕ್ಷರಾಗಿ ಮಠದ ಧಾರ್ಮಿಕ ಕಾರ್ಯಗಳಿಗೆ ಕುಂದು ಉಂಟಾಗದಂತೆ ವ್ಯವಸ್ಥೆ ಕಲ್ಪಿಸಿ ಮುನ್ನಡೆಸುತ್ತಿದ್ದಾರೆ. ಶ್ರೀಮಠದಲ್ಲಿ ಹಬ್ಬ ಹರಿದಿನಗಳಲ್ಲಿ ಭಜನೆ ಉಪನ್ಯಾಸ ಕಾರ್ಯಕ್ರಮ ಮಠಾಧೀಶರ ಗೋಷ್ಠಿ ಮುಂತಾದ ಧರ್ಮ ಪ್ರಸಾರ ಕಾರ್ಯಗಳನ್ನು ಮಾಡುತ್ತ ಸ್ವಂತಃ ಸಂಸ್ಕೃತ ಪಂಡಿತರು ಆಗಿರುವ ಶ್ರೀಗಳು, ಅಕ್ಷರಜ್ಞಾನ ಹಂಚುವ ಸಲುವಾಗಿ ಮಠದ ಪಕ್ಕದಲ್ಲಿರುವ 'ಬೆಳಕವಾಡಿ' ಗ್ರಾಮದಲ್ಲಿ ಮಠದ ವತಿಯಿಂದ 'ಆದರ್ಶ ಹಿರಿಯ ಪ್ರಾಥಮಿಕ ಶಾಲೆ' ತೆರೆದು ಆ ಗ್ರಾಮದ ಸುತ್ತಮುತ್ತಲ ಹಳ್ಳಿಯ ಬಡವಿದ್ಯಾರ್ಥಿಗಳಿಗೆ ಜ್ಞಾನಸುಧೆಯನ್ನು ನೀಡುತಾ ಶ್ರೀ ಸಿದ್ಧಗಂಗಮಠದ ಕಾಲೇಜು ಮತ್ತು ಪರಿಣಾಮಿಪುರದಲ್ಲಿರುವ ಸಿದ್ದಗಂಗೆಯ ಆಡಳಿತದಲ್ಲಿರುವ

ಪ್ರೌಢಶಾಲೆಯ ಉಸ್ತುವಾರಿಯನ್ನು ನೋಡಿಕೊಳ್ಳತ್ತ, ಶೈಕ್ಷಣಿಕ ಕ್ಷೇತ್ರದಲ್ಲಿ ಅಮೋಘ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಗಳು ಮುಂದೆ ಮಠದ ವತಿಯಿಂದ ವೀರಶೈವಅನಾಥಾಲಯ ಮತ್ತು ಶಾಲಾಕಾಲೇಜುಗಳನ್ನು ತೆರೆದು ಬಡವಿದ್ಯಾರ್ಥಿಗಳಿಗೆ ಜ್ಞಾನಧಾರೆ ಹಂಚಬೇಕೆನ್ನುವ ಅಭಿಲಾಷೆ ಶ್ರೀಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರದು ಹೀಗೆ ಮುನ್ನಡೆಯಲು ದೃಢ ಚಿತ್ತರಾಗಿ ಕಾರ್ಯಪ್ರವೃತ್ತರಾಗಿದ್ದಾರೆ.

ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನಲ್ಲಿ ಎಲೆಮರೆಯ ಕಾಯಂತೆ ಶೈಕ್ಷಣಿಕ ಸೇವೆ ಸಲ್ಲಿಸುತ್ತಿರುವ ಮಠವೆಂದರೆ **ಮಾಡ್ರಳ್ಳಿಯ 'ಶ್ರೀ ಗುರುಮಲ್ಲೇಶ್ವರ ಪಟ್ಟದ ಮಠ'** ಸಾಮಾಜಿಕ ಕಳಕಳಿ ಹಾಗೂ ಮಹಾತ್ಮಗಾಂಧೀಜಿಯವರ ಚಿಂತನೆಗಳನ್ನು ಮೈಗೂಡಿಸಿಕೊಂಡಿರುವ ಶ್ರೀಶಾಂತವೀರ ಮಲ್ಲಿಕಾರ್ಜುನಸ್ವಾಮಿಗಳು ಅಧಿಕಾರ ವಹಿಸಿಕೊಂಡದ್ದನಿಂದ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸಮಾಜಕ್ಕೆ ಏನಾದರೂ ಸೇವೆ ನೀಡಬೇಕು ಎಂಬ ಹಂಬಲದಿಂದ ಜವಾಬ್ದಾರಿ ವಹಿಸಿಕೊಂಡರು. ಬಡ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಕಡಿಮೆ ಖರ್ಚಿನಲ್ಲಿ ಉತ್ತಮ ಶಿಕ್ಷಣವನ್ನು ನೀಡಬೇಕೆಂಬುದೇ ಶ್ರೀಗಳ ಉದ್ದೇಶ. ಅದಕ್ಕಾಗಿಯೇ ಮಾಡ್ರಳ್ಳಿ ಗ್ರಾಮದಿಂದ ಹತ್ತು ಕಿಲೋಮೀಟರ್ ಅಂತರದಲ್ಲಿರುವ ತಾಲ್ಲೂಕು ಕೇಂದ್ರವಾದ ತಿ.ನರಸೀಪುರದಲ್ಲಿ ಮಠದ ಹಿರಿಯ ಗುರುಗಳ ಹೆಸರಿನಲ್ಲಿ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಾಲಾ ಶಿಕ್ಷಣವನ್ನೂ ಆರಂಭಿಸಿದರು. ನಂತರ ಹಂತ ಹಂತವಾಗಿ ಮಾಧ್ಯಮಿಕ ಹಾಗೂ ಪ್ರೌಢಶಾಲೆಯ ಮಟ್ಟಕ್ಕೆ ಬೆಳಸಿದ್ದಾರೆ. ಪ್ರಸ್ತುತ ಈ ಶಾಲೆಯಲ್ಲಿ ಎಲ್.ಕೆ.ಜಿ ಯಿಂಧ ಪ್ರಾರಂಭವಾದ ಪ್ರೌಢಶಾಲೆಯವರೆಗೂ ವಿದ್ಯಾಭ್ಯಾಸ ನೀಡಲಾಗುತ್ತಿದೆ. ಅಲ್ಲದೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಸ್ವ-ಉದ್ಯೋಗ ಕಲ್ಪಿಸುವ ಉದ್ದೇಶದಿಂದ 'ಕೈಗಾರಿಕಾ ತರಬೇತಿ ಸಂಸ್ಥೆ' ಯ ಮೂಲಕ ತಾಂತ್ರಿಕ ಶಿಕ್ಷಣವನ್ನು ಆರಂಭಿಸಿದರು. ಇಲ್ಲಿ ಈಗ ಸುಮಾರು ೫೦೦ ಕ್ಕೂ ಹೆಚ್ಚು ಗ್ರಾಮೀಣ ಮತ್ತು ನಗರ ಪ್ರದೇಶದ ವಿದ್ಯಾರ್ಥಿಗಳು ಕಡಿಮೆ ಖರ್ಚಿನಲ್ಲಿ ಯೋಗ್ಯವಾದ ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ. ನುರಿತ ಹಾಗೂ ಉತ್ತಮ ಶಿಕ್ಷಕರಿಂದ ಬೋಧನೆಯನ್ನು ನೀಡಲಾಗುತ್ತಿದೆ. ಸಮಯ ಪಾಲನೆಗಾಗಿ ಶಾಲಾವಾಹನ ಸೌಲಭ್ಯ ಕಲ್ಪಿಸಿ ದೃಢ ಸಂಕಲ್ಪ, ಆತ್ಮವಿಶ್ವಾಸ, ಅವಿರತ ಪರಿಶ್ರಮ ನಿಷ್ಕಲ್ಮಶ ಮನಸ್ಸಿನಿಂದ ಅಭಿವೃದ್ಧಿ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕೆಂಬುದು ಶ್ರೀಗಳ ಉದ್ದೇಶ. ಶ್ರೀಗಳಿಗೆ ಶಿಕ್ಷಣಕ್ಕೆ ಸಂಬಂಧಿಸಿದ ಅರಿವು ಮೊದಲೆ ಇತ್ತು. ಸ್ವತಃ ಬಿಎಸ್ಸಿ ಬಿ.ಇಡಿ ಪದವಿದರರಾಗಿದ್ದ ಶ್ರೀಗಳು ತಿ.ನರಸೀಪುರ ಸಮೀಪವಿರುವ ಬೆನಕನಹಳ್ಳಿ ಗ್ರಾಮದಲ್ಲಿದ್ದ ಶ್ರೀಗುರುಲ್ಲೇಶ್ವರ ಪ್ರೌಢಶಾಲೆಯ ಮುಖ್ಯಸ್ಥರಾಗಿ ಐದಾರು ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದರು. ಆದರೆ ಸ್ವತಂತ್ರ ಕಲ್ಪನೆಯಲ್ಲಿ ಕಾರ್ಯ ಸಾಧಿಸುವ ಹಂಬಲದ ಶ್ರೀಗಳು ಈ ಶಾಲೆಯನ್ನೂ ವಿದ್ಯೋದಯಶಿಕ್ಷಣಸಂಸ್ಥೆಗೆ ವರ್ಗಾಯಿಸಿದರು. ಮುಂದೆ ಶಿಕ್ಷಣಕ್ಕೆ ಸಂಬಂಧಿಸಿದಂತೆ ' ಕಾಲೇಜು ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟು ,ಯೋಗ್ಯ ಶಿಕ್ಷಣ ಒದಗಿಸಬೇಕೆಂದು ಶ್ರೀಗಳ ಆಶಯ.

ಹೆಗ್ಗಡದೇವನಕೋಟೆ ತಾಲ್ಲೂಕು ಮಾದಾಪುರ ಗ್ರಾಮದಲ್ಲಿರುವ **ಶ್ರೀ ಚಂದ್ರಮೌಳೇಶ್ವರ ಮಠವು** ಸಹ ಕಾಡಂಚಿನ ಮಕ್ಕಳ ಶೈಕ್ಷಣಿಕ' ಅಭಿವೃದ್ದಿಗೆ ತನ್ನದೆ ಆದಂತಹ ಕೊಡುಗೆ ನೀಡುತ್ತ ಬಂದಿದೆ. ಶ್ರೀ ಮಠದ ಗುರುಗಳಾಗಿದ್ದ ಶ್ರೀಚಂದ್ರಮೌಳೇಶ್ವರ ಸ್ವಾಮಿಗಳು ಪದವಿ ಶಿಕ್ಷಣ ಮುಗಿಸಿ ವೀರಶೈವ ಆಗಮ, ಸಂಸ್ಕೃತ ಹಾಗೂ ವೇದಅಧ್ಯಯನವನ್ನು ಮಾಡಿ ಶಿಕ್ಷಣದ ಮಹತ್ವವನ್ನು ಅರಿತುಕೊಂಡಿದ್ದರು. ಇದರ ಫಲವಾಗಿ ಶ್ರೀಗಳು ಈ ಚಂದ್ರಮೌಳೇಶ್ವರ ಮಠದ ಪೀಠಾಧ್ಯಕ್ಷರಾದ ಮೇಲೆ ಕೃಷಿ ಮತ್ತು ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಿದರು. ಅದರಲ್ಲೂ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ನೀಡಿದರು. ಮಾನವನ ಉದ್ದಾರ ಶಿಕ್ಷಣದಿಂದ ಮಾತ್ರ ಸಾಧ್ಯ ಎಂಬುದು ಇವರ ಮನದಾಳದ ಮಾತು.

ಶ್ರೀಗಳು ಮೊದಲು ಶ್ರೀಮಠದ ಪಕ್ಕದಲ್ಲೆ ಇರುವ ಮಾದಾಪುರ ಗ್ರಾಮದಲ್ಲಿ ಪ್ರಾಥಮಿಕ ಶಾಲೆ, ಸಂಸ್ಕೃತ ಪಾಠಶಾಲೆ ಹಾಗೂ ಪ್ರೌಢಶಾಲೆಗಳನ್ನು ಆರಂಭಿಸಿದರು. ನಂತರ ತಮ್ಮ ಸ್ವಕ್ಷೇತ್ರದಿಂದ ಸುತ್ತಲೂ ಇರುವಂತ ಜ್ಞಾನಾರ್ಥಿಗಳಿಗೆ ಶಿಕ್ಷಣ ದೊರಕಲಿ ಎಂದು ತಾಲ್ಲೂಕು ಕೇಂದ್ರವಾದ ಹೆಗ್ಗಡದೇವನ ಕೋಟೆಯಲ್ಲೂ ಸಹ ಪ್ರಾಥಮಿಕ, ಪ್ರೌಢಶಾಲೆ ಮತ್ತು ಸಂಸ್ಕೃತ ಪಾಠಶಾಲೆ ಪ್ರಾರಂಭಿಸಿದರು. ಹಂತ ಹಂತವಾಗಿ ಆಲನಹಳ್ಳಿಯಲ್ಲಿ ಪ್ರಾಥಮಿಕ ಮತ್ತು ಸಂಸ್ಕೃತಪಾಠಶಾಲೆ, ಕಟ್ಟೆ ಮನುಗುನಹಳ್ಳಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನೂ ಪ್ರಾರಂಭಿಸಿ ಗ್ರಾಮಾಂತರ ಮಕ್ಕಳು ವಿದ್ಯೆ ಕಲಿಯಲು ಉತ್ತಮ ವೇದಿಕೆ ಒದಗಿಸಿದ್ದಾರೆ. ಇಷ್ಟಲ್ಲದೆ ಮಠದ ಆವರಣದಲ್ಲಿ ಬಡ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ಉಚಿತ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ, ಊಟ ಮತ್ತು ವಸತಿ ವ್ಯವಸ್ಥೆ ಕಲ್ಪಿಸಿದ್ದು ಹಿರಿಯ ಗುರುಗಳ ಆಶಯದಂತೆ ಈಗಿನ ಗುರುಗಳು ಗುರುಗಳ ಧಾರ್ಮಿಕ, ಶೈಕ್ಷಣಿಕ ರಂಗಕ್ಕೆ ಹೆಚ್ಚಿನ ಗಮನ ನೀಡುತ್ತಿರುವುದನ್ನು ನಾವು ಗಮನಿಸಬಹುದು.

ಮೈಸೂರುಜಿಲ್ಲೆಯಲ್ಲಿ ಅತ್ಯಂತ ಪ್ರಸಿದ್ಧಪಡೆದಂತ ಮಠ ಎಂದರೆ ಅರಮನೆ **ಪಂಚಗವಿಮಠ** ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀಮಠವು ಸುಮಾರು ೧೫ ರಿಂದ ೧೬ ಗುರುಗಳನ್ನು ಕಂಡಿದೆ. ಅದರಲ್ಲಿ ಪ್ರಮುಖರಾದವರೆಂದರೆ ಶ್ರೀಗೌರಿಶಂಕರ ಮಹಾಸ್ವಾಮಿಗಳು ಏಳನೇ ಗುರುಗಳಾಗಿ ಅಧಿಕಾರ ವಹಿಸಿಕೊಂಡ ನಂತರ ಮಠದ ಆಡಳಿತವನ್ನು ಇವರ ನಂತರದ ಪೀಠಾಧಿಪತಿಗಳಿಂದ ಶ್ರೀಶಿವಪ್ರಸಾದ ಸ್ವಾಮಿಗಳು ಧಾರ್ಮಿಕ ಚಟುವಟಿಕೆ ನಡೆಸುವುದರ ಜೊತೆಗೆ ಶೈಕ್ಷಣಿಕ ರಂಗಕ್ಕಾಗಿ ೧೯೮೨ರಲ್ಲಿ ಶ್ರೀ ಗೌರಿಶಂಕರರು ವಿದ್ಯಾಸಂಸ್ಥೆಯನ್ನು ಆರಂಭಿಸಿದರು. ನಿರ್ಗತಿಕ ಮಕ್ಕಳಿಗಾಗಿ ಅನಾಥಾಲಯ ಮತ್ತು ಪ್ರಾಥಮಿಶಾಲೆಗಳನ್ನು ಆರಂಭಿಸಿದರು. ನಂತರದ ದಿನಗಳಲ್ಲಿ ಈಸಂಸ್ಥೆಗಳ ಆಡಳಿತವನ್ನು ಮೈಸೂರಿನ ಶ್ರೀಹೊಸಮಠಕ್ಕೆ ವಹಿಸಿಕೊಡಲಾಗಿದೆ.

ನಗರದಲ್ಲಿ ಮತ್ತೊಂದು ವೀರಶೈವಮಠ ದೇವರಾಜಮೊಹಲ್ಲದಲ್ಲಿರುವ **ಶ್ರೀಶಿವಾಯ ನಮಃಮಠ** ಈ ಮಠ ವಿರಕ್ತಪರಂಪರೆಯ ಶಾಖೆಯಾಗಿ ಬೆಳೆದು ಧಾರ್ಮಿಕ ಮತ್ತು ಸಾಮಾಜಿಕ ಕಳಕಳಿಯಿಂದ ಬೆಳವಣಿಗೆ ಹೊಂದುತ್ತ ಶೈಕ್ಷಣಿಕ ರಂಗದಲ್ಲಿ ತನ್ನದೆ ಆದಂತಹ ಅಳಿಲು ಸೇವೆ ಸಲ್ಲಿಸುತ್ತಿದೆ. ಶ್ರೀಮಠವು ಮೈಸೂರುನಗರದ ರಾಜೇಂದ್ರಬಡಾವಣೆಯಲ್ಲಿ ನೂತನವಾಗಿ ಮಠದ ಕಟ್ಟದ ನಿರ್ಮಿಸಿ ಶ್ರೀಅಮರಭಾರತಿ ಎಜುಕೇಶನ್ ಸೊಸೈಟಿಯನ್ನು ೧೯೬೬ರಲ್ಲಿ ಪ್ರಾರಂಭಿಸಿ ಶಿಶುವಿಹಾರ, ಸಂಸ್ಕೃತ ಪಾಠಶಾಲೆ, ಹಿಂದಿಶಾಲೆ, ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಗಳನ್ನೂ ಪ್ರಾರಂಭಿಸಿತು. ಶ್ರೀಮಠದ ಆವರಣದಲ್ಲಿ ವಿದ್ಯಾರ್ಥಿ ನಿಲಯವನ್ನು ಪ್ರಾರಂಬಿಸಿದ್ದು ಜ್ಞಾನಗಂಗಾ(ಜ್ಞಾನೋದಯ) ಕಾನ್ವೆಂಟ್ ಮೂಲಕ ಕಲಿಯುವ ಬಡ ಮಕ್ಕಳಿಗೆ ಆಶ್ರಯ ಕಲ್ಪಿಸಲಾಗಿದೆ.

ಜಿಲ್ಲೆಯ ಹುಣಸೂರು ತಾಲ್ಲೂಕಿನ ಪ್ರಸಿದ್ಧ ಮಠವಾಗಿರುವ ಗಾವಡಗೆರೆಯ **'ಓಂ ಶ್ರೀಗುರುಲಿಂಗ ಜಂಗಮದೇವರ ಮಠ'**ದ ಶ್ರೀನಟರಾಜಮಹಾಸ್ವಾಮಿಗಳು ತಮ್ಮ ಹಿರಿಯಶ್ರೀಗಳಾದ ಶ್ರೀನಂಜುಂಡ ಶಿವಯೋಗಿಗಳ ಹೆಸರಿನಲ್ಲಿ ಉಚಿತವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿ ಕಲಿಕೆಯಲ್ಲಿ ವಂಚಿತರಾಗಿದ್ದ ಬಡಮಕ್ಕಳಿಗೆ ಆಶ್ರಯ ನೀಡಿದ್ದಾರೆ. ಮಠದ ಆವರಣದಲ್ಲಿ ಒಂದು ಪ್ರೌಢಶಾಲೆ ಹಾಗೂ ಸಂಸ್ಕೃತ ಪಾಠಶಾಲೆಯನ್ನೂ ಪ್ರಾರಂಭಿಕ ಕಲಿಕೆಗೆ ಅವಕಾಶ ಮಾಡಿಕೊಟ್ಟು. ಮೂವತ್ತು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಟ್ಟಡವನ್ನು ನಿರ್ಮಿಸಿ, ವಿದ್ಯಾದಾನ ಮಾಡುತ್ತಿದ್ದಾರೆ. ಮುಂದೆ ಹೆಚ್ಚಿನ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಬೇಕೆಂಬ ಆಶಯ ಪ್ರಸ್ತುತ ಶ್ರೀಗಳದು. **ಬಿದರಚೌಕಿಮಠ** ಎಂದೇ ಪ್ರಸಿದ್ಧವಾದ ಪರಿಣಾಮಿಪುರದ ಶ್ರೀಮಠವು ೧೯ ಗುರುಗಳನ್ನು ಕಂಡು ಶ್ರೀಮಠ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. ಶ್ರೀಮಠದ ೫ನೇ ಪೀಠಾಧಿಪತಿಗಳಾದ ಶ್ರೀಗುರುಸಿದ್ದ ಸ್ವಾಮಿಗಳು ಹಿಂದಿನ ಗುರುಗಳಂತೆ ಕೆರೆ ಕಟ್ಟೆ ಕಟ್ಟಿಸದಿದ್ದರೂ, ಶಿಕ್ಷಣಕ್ಕೆ ಹೆಚ್ಚಿನ ಮಹತ್ವಕೊಟ್ಟಿದ್ದಾರೆ. ಮಠದ ವತಿಯಿಂದ ಶಿಕ್ಷಣ ಸಂಸ್ಥೆಗೆ ನಡೆಸಬಹುದಾಗಿದ್ದರೂ, ಈ ಪ್ರಯತ್ನಕ್ಕೆ ಕೈ ಹಾಕದೆ ಸಿದ್ದಗಂಗೆಯ ವಿದ್ಯಾಸಂಸ್ಥೆಗೆ ನಾಲ್ಕು ಎಕರೆ ಜಾಗವನ್ನು ದಾನವಾಗಿ ನೀಡಿ ಪ್ರೌಢಶಾಲೆ ಮತ್ತು ಕಾಲೇಜನ್ನು ಪ್ರಾರಂಭಿಸಲು ನೆರವಾಗಿದ್ದಾರೆ. ಈ ಹಿಂದೆ ಮಠದವತಿಯಿಂದ ನಡೆಯುತ್ತಿದ್ದ ವಿದ್ಯಾರ್ಥಿನಿಲಯವು ಕಾರಾಣಾಂತರಗಳಿಂದ ನಿಂತು ಹೋಗಿದ್ದನ್ನು ಪುನರ್ ಸ್ಥಾಪಿಸಿ ಕಲಿಯುವ ಬಡ ಮಕ್ಕಳಿಗೆ ನೆರವಾಗಲೂ ಬಯಸಿದಿದ್ದಾರೆ. ಪ್ರಸ್ತುತ ಗುರುಗಳ ಉತ್ತಮ ಜ್ಞಾನಿಗಳು ಶಿಕ್ಷಣ ತಜ್ಞರು ತತ್ವಜ್ಞಾನಿಗಳಾಗಿ ಇಳಿ ವಯಸ್ಸಿನಲ್ಲೂ ದಣಿವರಿಯದ ಶ್ರೀಗಳೂ ಬಡ ಮತ್ತು ಧಾರ್ಮಿಕ ಉಪನ್ಯಾಸಗಳ ಮೂಲಕ ಶೈಕ್ಷಣಿಕ ಪ್ರಚಾರ ಮಾಡುತ್ತಿದ್ದಾರೆ.

ಇದಲ್ಲದೆ ಪಿರಿಯಾಪಟ್ಟಣ ತಾಲ್ಲೂಕಿನ **ರಾವಂದೂರ ಮುರಘಮಠ**ದ ಶಾಖೆಯು ಕೂಡ ಶೈಕ್ಷಣಿಕ ಕ್ಷೇತ್ರದಲ್ಲಿ ಪಾಲುದಾರಾಗಿದ್ದು ಶ್ರೀಮಠದ ಆವರಣದ ಉಚಿತ ವಿದ್ಯಾರ್ಥಿನಿಲಯ ಪ್ರಾರಂಭಿಸಲಾಗಿದೆ. ಶ್ರೀಗಳಾದ ಮೋಕ್ಷಪತಿಸ್ವಾಮಿಗಳು  ಮಠದ ಏಳಿಗೆಯ ಜೊತೆಗೆ ಶಿಕ್ಷಣವನ್ನು ಜಾಗೃತ ಮಟ್ಟದಲ್ಲಿ ಸಮಾಜದ ಬಡವರ್ಗದ ಜನತೆಯ ಹತ್ತಿರ ಕೊಂಡೆಯ್ಯುವ ಕಾರ್ಯ ಮಾಡುತ್ತಿದ್ದಾರೆ. ಮಠದ ವತಿಯಿಂದ ಪ್ರಾಥಮಿಕ, ಪ್ರೌಢಶಾಲೆ ಮತ್ತು ಕೈಗಾರಿಕತರಭೇತಿಕೇಂದ್ರ,ಇನ್ನೂ ಇತರ ಶಾಲಾ ಕಾಲೇಜು ತೆರೆಯಬೇಕೆಂಬ ಹಂಬಲ ಶ್ರೀಗಳಲ್ಲಿದೆ.

ಮುಡುಕುತೊರೆಯಲ್ಲಿವ ರಂಭಾಪುರಿಪೀಠದ **'ತೋಪಿನ ಮಠ'**ದ ಶ್ರೀ ಮಹಾಲಿಂಗ ಶಿವಾಚಾರ್ಯ ಸ್ವಾಮಿಗಳು ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲಾಶ್ರಮ ಸ್ಥಾಪಿಸಿ ಇಲ್ಲಿ ೩೦ ರಿಂದ ೪೦ ವಿದ್ಯಾರ್ಥಿಗಳಿಗೆ ಉಚಿತವಾಗಿ ವೀರಶೈವ ಧರ್ಮದ ಅಧ್ಯಯನ ನಡೆಸುತ್ತಿದ್ದಾರೆ. ಇಲ್ಲಿ ಶಿವಪೂಜಾ ವಿಧಿ, ಪೂರ್ವ ಪ್ರಯಾಗ, ಜ್ಯೋತಿಷ್ಯ ಶಾಸ್ತ್ರ ಬೋಧಿಸುತ್ತಿದ್ದು, ವಿದ್ಯಾರ್ಥಿಗಳಿಗೆ ಐದು ವರ್ಷಗಳ ಕಾಲ ಸಮಗ್ರ ವೀರಶೈವ ಧರ್ಮಾಚಾರಣೆ ವಿಧಿ ವಿಧಾನಗಳನ್ನು ಬೋಧಿಸುವ ವ್ಯವಸ್ಥೆ ಮಾಡಿದ್ದಾರೆ. ಈ ಮಠದಲ್ಲಿ ಸಂಸ್ಕಾರಗೊಂಡ ವಿದ್ಯಾರ್ಥಿಗಳು ನಾಡಿನ ವಿವಿಧ ಮಠಗಳಲ್ಲಿ ಮಠಾಧೀಶರಾಗಿ ಅಧಿಕಾರ ವಹಿಸಿಕೊಂಡ ಸಮಾಜಿಕ ಸೇವೆ ಸಲ್ಲಿಸುತ್ತಿದ್ದಾರೆ.

ಈ ಮೂಲಕ ಮೈಸೂರು ಜಿಲ್ಲೆಯ ವೀರಶೈವ ಮಠಗಳು ಶೈಕ್ಷಣಿಕ ಕ್ಷೇತ್ರಕ್ಕೆ ತಮ್ಮದೆ ಆದಂತಹ ಕೊಡುಗೆ ನೀಡಿವೆ ಮತ್ತು ಒಂದು ಸರ್ಕಾರವೇ ಮಾಡಬಹುದಾದಂತ ಕೆಲಸವನ್ನೂ ಯಾವುದೇ ಫಲಾಪೇಕ್ಷೆ ಇಲ್ಲದೆ ನಿಸ್ವಾರ್ಥ ಸೇವೆಯಿಂದ ಮಾಡುತ್ತಿರುವುದನ್ನು ಈ ಮಠಗಳಲ್ಲಿ ಕಾಣಬಹುದು.